## ಅಹ್ಮದಿಯಾ ವಾರ್ತೆ


ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ


بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

**ವರ್ಷ: 03**

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

**ಸಂಚಿಕೆ: 37**

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**15 ಸೆಪ್ಟೆಂಬರ್ 2022, 15 ತಬೂಕ್ 1401 ಹಿಜರಿ ಶಮ್‌ಸಿ,**
**18 ಸಫರ್ 1444 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

وَاكْتُبْ لَنَا فِيْ هٰذِهِ الدُّنْيَا
حَسَنَةً وَّفِي الْاٰخِرَةِ اِنَّا هُدْنَا اِلَيْكَ

**(ಅಲ್ ಅಅ್‌ರಾಫ್ : 157)**

**ಅಂದರೆ: 'ನಮಗೆ ಈ ಲೋಕದಲ್ಲೂ ಪರಲೋಕದಲ್ಲೂ ಒಳಿತನ್ನು ವಿಧಿಸು. ನಾವು ನಿನ್ನೆಡೆಗೆ (ಪಶ್ಚಾತ್ತಾಪಗೊಂಡು) ಮರಳಿದ್ದೇವೆ.'**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಪ್ರವಾದಿ(ಸ) ರವರು ಕೇಳಿದವರಿಗೆ ತಿರಸ್ಕರಿಸುತ್ತಿರಲಿಲ್ಲ

**(2093)** ಹಝ್ರತ್ ಸಹಲ್ ಬಿನ್ ಸಅದ್(ರ) ವರದಿ ಮಾಡುತ್ತಾರೆ: ಅವರು ಹೀಗೆ ಹೇಳಿದರು: ಒಬ್ಬ ಮಹಿಳೆ ಬುರ್‌ದವನ್ನು ತಂದು ಹೇಳಿದಳು: ಈ ಬುರ್‌ದಃ ಏನು ಎಂದು ನಿಮಗೆ ತಿಳಿದಿದೆಯೇ? ಅದಕ್ಕೆ ಹೇಳಿದರು ಹೌದು. ಅದು ಅಂಚಿನ ಚಾದರವಾಗಿದೆ. ಆ ಮಹಿಳೆ ಹೇಳಿದಳು: ಯಾ ರಸೂಲಲ್ಲಾಹ್!! ನಿಮಗೆ ಧರಿಸಲು ನಾನು ಅದನ್ನು ನನ್ನ ಕೈಯಿಂದ ನೇಯ್ದಿದ್ದೇನೆ. ಪ್ರವಾದಿ(ಸ)ರವರು ಅದನ್ನು ತೆಗೆದುಕೊಂಡರು. ಅವರಿಗೆ ಅದರ ಅವಶ್ಯಕತೆ ಇತ್ತು. ತದನಂತರ ಅವರು ನಮ್ಮ ಬಳಿ ಬಂದರು ಆಗ ಅವರು ಅದೇ (ಚಾದರದಲ್ಲಿ) ಲುಂಗಿಯಲ್ಲಿದ್ದರು. ಸಹಾಬರಲ್ಲಿ ಒಬ್ಬರು ಹೇಳಿದರು: ಓ ಪ್ರವಾದಿವರ್ಯರೇ!! ಇದನ್ನು (ಚಾದರ) ಧರಿಸಲು ನನಗೆ ಕೊಡಿ. ಅದಕ್ಕೆ ಅವರು(ಸ) ಹೇಳಿದರು: ಒಳ್ಳೆಯದು, ಪ್ರವಾದಿ(ಸ) ಸ್ವಲ್ಪ ಸಮಯದವರೆಗೆ ಆ ಸಭೆಯಲ್ಲಿ ಕುಳಿತ ನಂತರ ಅಲ್ಲಿಂದ ಎದ್ದು ಒಳಗೆ ಹೋಗಿ ಅದನ್ನು ಮಡಚಿ ಆ ವ್ಯಕ್ತಿಗೆ ಕಳುಹಿಸಿದರು. ಜನರು ಅವನಿಗೆ ಹೇಳಿದರು: ನೀನು ಇದನ್ನು ಪ್ರವಾದಿ(ಸ) ಅವರೊಂದಿಗೆ ಕೇಳಿದ್ದು ಸರಿಯಲ್ಲ. ಪ್ರವಾದಿ(ಸ) ರವರು ಕೇಳುವವರಿಗೆ ಎಂದೂ ತಿರಸ್ಕರಿಸುವುದಿಲ್ಲ ಎಂದು ನಿನಗೆ ತಿಳಿದಿದೆ. ಅದಕ್ಕೆ ಆ ವ್ಯಕ್ತಿಯು ಹೇಳಿದನು: ಅಲ್ಲಾಹನ ಆಣೆ! ನಾನು ಇದನ್ನು ನನ್ನ (ಕಫನ್) ಮರಣದ ವಸ್ತ್ರವಾಗಲಿ ಎಂದು ಕೇಳಿದ್ದೇನೆ. ಹಝ್ರತ್ ಸಹಲ್(ರ) ಹೇಳಿದರು: ಆ ಚಾದರವೇ ಅವರ ಕಫನ್ ಆಯಿತು. **(ಬುಖಾರಿ, ಸಂಪುಟ–4, ಕಿತಾಬ್ ಅಲ್–ಬುಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**


**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 9902678609**


## ತನ್ನ ಸಂಪತ್ತಿನಿಂದ ಅರ್ಹರಿಗೆ ಏನನ್ನೂ ನೀಡದವನು ಮಾತ್ರ ಜಿಪುಣನಲ್ಲ ಎಂದು ನೆನಪಿಡಿ ಬದಲಿಗೆ, ಅಲ್ಲಾಹನಿಂದ ಜ್ಞಾನವನ್ನು ಪಡೆದು ಇತರರಿಗೆ ಕಲಿಸುವುದಕ್ಕೆ ಹಿಂಜರಿಯುವವನು ಸಹ ಜಿಪುಣನಾಗಿದ್ದಾನೆ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ತನ್ನ ಸಂಪತ್ತಿನಿಂದ ಅರ್ಹರಿಗೆ ಏನನ್ನೂ ನೀಡದವನು ಮಾತ್ರ ಜಿಪುಣನಲ್ಲ, ಬದಲಿಗೆ, ಅಲ್ಲಾಹನಿಂದ ಜ್ಞಾನವನ್ನು ಪಡೆದು ಇತರರಿಗೆ ಕಲಿಸುವುದಕ್ಕೆ ಹಿಂಜರಿಯುವವನು ಜಿಪುಣನಾಗಿದ್ದಾನೆ ಎಂದು ನೆನಪಿಡಿ. ತಮ್ಮ ಜ್ಞಾನ ಮತ್ತು ಕಲೆಯನ್ನು ಅವರು ಕಲಿತರೆ ನಾವು ಅಪಮೌಲ್ಯಗೊಳ್ಳುತ್ತೇವೆ ಅಥವಾ ಆದಾಯದಲ್ಲಿ ವ್ಯತ್ಯಾಸವಾಗುತ್ತದೆ ಎಂಬ ಆಲೋಚನೆಯೊಂದಿಗೆ ಅದನ್ನು ಕಲಿಸದೆ ಇರುವುದು ಶಿರ್ಕ್ ಆಗುತ್ತದೆ, ಏಕೆಂದರೆ ಈ ಸಂದರ್ಭದಲ್ಲಿ ಅವನು ಈ ಜ್ಞಾನ ಅಥವಾ ಕಲೆಯನ್ನು ತನ್ನೊಬ್ಬನ ಮಾತ್ರ ಜೀವನೋಪಾಯವಾಗಿ ತೆಗೆದುಕೊಳ್ಳುತ್ತಾನೆ. ಅದೇ ರೀತಿ ನೀತಿಗೆ ತಕ್ಕಂತೆ ನಡೆದುಕೊಳ್ಳದವನೂ ಜಿಪುಣನಾಗಿದ್ದಾನೆ. ನೈತಿಕತೆಯನ್ನು ನೀಡುವುದು ಎಂದರೆ ಸರ್ವಶಕ್ತನಾದ ಅಲ್ಲಾಹನು ತನ್ನ ಅನುಗ್ರಹದಿಂದ ನೀಡಿರುವ ಉದಾತ್ತ ನೈತಿಕತೆಯನ್ನು ಅವನ ಜೀವಿಗಳನ್ನು ಆ ನೀತಿಗಳೊಂದಿಗೆ ಪರಿಗಣಿಸಬೇಕು. ಆ ಜನರು ಅವರ ಉದಾಹರಣೆಯನ್ನು ನೋಡುವ ಮೂಲಕ ತಮ್ಮಲ್ಲಿ ನೈತಿಕತೆಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಇಖ್ಲಾಖ್ (ನೈತಿಕತೆ) ಎಂದರೆ ಭಾಷೆಯ ಸೌಮ್ಯತೆ ಮತ್ತು ಪದಗಳ ಸೌಮ್ಯತೆಯಿಂದ ವರ್ತಿಸುವುದು ಎಂದಲ್ಲ, ಆದರೆ ಧೈರ್ಯ, ಸದ್ಗುಣ ಮತ್ತು ಪರಿಶುದ್ಧತೆಯಿಂದ ವರ್ತಿಸಬೇಕು. ಮನುಷ್ಯನಿಗೆ ನೀಡಲಾದ ಶಕ್ತಿಗಳು ವಾಸ್ತವವಾಗಿ ಎಲ್ಲಾ ನೈತಿಕ ಶಕ್ತಿಗಳಾಗಿವೆ, ಅವುಗಳನ್ನು ಸಂದರ್ಭೋಚಿತವಾಗಿ ರೀತಿಯಲ್ಲಿ ಬಳಸುವುದು ಮಾತ್ರ ಅವರನ್ನು ನೈತಿಕ ಸ್ಥಿತಿಗೆ ತರುತ್ತದೆ. ಸಾಂದರ್ಭಿಕವಾಗಿ ಕೋಪದ ಬಳಕೆಯು ನೈತಿಕ ಬಣ್ಣವನ್ನು ಪಡೆಯುತ್ತದೆ.

**(ಮಲ್‌ಫೂಝಾತ್, ಸಂಪುಟ–1, ಪುಟ–393, ಮುದ್ರಿತ ಖಾದಿಯನ್ 2018)**

**ಅಹ್ಲೆ ಖುರ್‌ಆನ್ (ಪವಿತ್ರ ಖುರ್‌ಆನ್‌ನ ಅನುಯಾಯಿಗಳು) ಹೇಳುತ್ತಾರೆ ಪ್ರವಾದಿ ಮುಹಮ್ಮದ್(ಸ) ಅವರು ನಮ್ಮಂತಹ ವ್ಯಕ್ತಿ ಆಗಿದ್ದು ಅವರ ಮಾತುಗಳನ್ನು ನಾವು ಏಕೆ ನಂಬಬೇಕು ಪವಿತ್ರ ಖುರ್‌ಆನಿನಲ್ಲಿರುವ ಬೋಧನೆಗಳನ್ನು ನಾವು ಸ್ವೀಕರಿಸುತ್ತೇವೆ ರಸೂಲುಲ್ಲಾಹ್(ಸ) ಅವರಿಗೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನ ತಿಳುವಳಿಕೆಯು ಎಲ್ಲರಿಂದಲೂ ಹೆಚ್ಚಾಗಿ ನೀಡಿದ್ದನು, ಅವರು ಪವಿತ್ರ ಖುರ್‌ಆನ್‌ನಿಂದ ಗಳಿಸಿದ ಅರ್ಥಗಳನ್ನು ನಾವು ಅರ್ಥೈಸಿಕೊಳ್ಳಲು ಅಸಾಧ್ಯ**
**ಈ ಹದೀಸ್ ಅಧಿಕೃತವಲ್ಲ ಎಂದು ವಾದಿಸಲು ನಮಗೆ ಹಕ್ಕಿದೆ, ಆದರೆ ಹದೀಸ್ ಅಧಿಕೃತವಾಗಿದೆ ಆದರೆ ಪ್ರವಾದಿ ಮುಹಮ್ಮದ್(ಸ) ತಪ್ಪು ಮಡಿದ್ದಾರೆ ಎಂದು ಹೇಳುವುದು ತಪ್ಪಾಗಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 90 **ವ ಯೌಮ ನಬ್‌ಅಸು ಫಿ ಕುಲ್ಲಿ ಉಮ್ಮತಿನ್ ಶಹೀದನ್ ಅಲೈಹಿಮ್ಮಿನ್ ಅನ್‌ಫುಸಿಹಿಮ್ ವ ಜಿಅ್‌ನಾ ಬಿಕ ಶಹೀದನ್ ವ ಜಿಅ್‌ನಾ ಬಿಕಶಹೀದನ್ ಅಲಾ ಹಾಉಲಾಯಿ ವ ನಝ್ಝಲ್ನಾ ಅಲೈಕಲ್ ಕಿತಾಬ ತಿಬ್ಯಾನಲ್ಲಿಕುಲ್ಲಿ ಶೈಇನ್ ವ ಹುದವ್ವರಹ್‌ಮತ ವ್ವ ಬುಶ್ರಾ ಲಿಲ್ ಮುಸ್ಲಿಮೀನ** ವನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ:

ಈ ಆಯತ್‌ನಲ್ಲಿ ಮೊದಲ ಆಯತ್‌ನ ವಿಷಯವನ್ನು ಪೂರ್ಣಗೊಳಿಸಲಾಗಿದೆ, ಎಲ್ಲಾ ಪ್ರವಾದಿಗಳು ತಮ್ಮ ಉದಾಹರಣೆಯನ್ನು ಪ್ರಸ್ತುತಪಡಿಸಿದಾಗ ನೀವು ಸಹ ಈ ಜನರಿಗೆ ಸಾಕ್ಷಿಯಾಗಿ ಕಾಣಿಸಿಕೊಳ್ಳುತ್ತೀರಿ ಮತ್ತು ನಾವು ನಿಮಗೆ ತೋರಿಸಿ ಕೇಳುತ್ತೇವೆ ಇವರು ಸಹ ನಿಮ್ಮಲ್ಲಿ ಒಬ್ಬರಾಗಿದ್ದರು ಇವರು ಏಕೆ ಬಹುದೇವರಾಧನೆ ಮತ್ತು ಕೆಟ್ಟ ನಂಬಿಕೆಗಳಲ್ಲಿ ತೊಡಗಲಿಲ್ಲ ಮತ್ತು ಸರ್ವಶಕ್ತನಾದ ಅಲ್ಲಾಹನ ವಿಧೇಯ ದಾಸನಾಗಿ ಬೇರೆಯವರಿಗೆ ಮಾರ್ಗದರ್ಶಕನಾಗಿ ಉಳಿದುಕೊಂಡನು? ಅದಕ್ಕೆ ಕಾರಣ ಇದಲ್ಲವೆ ಅವನ ಮೇಳೆ ಸರ್ವಶಕ್ತನಾದ ಅಲ್ಲಾಹನ ಕಲಾಮ್ ಅವತರಿಸಲಾಯಿತು ಮತ್ತು ನೀವು ಅದರಿಂದ ವಂಚಿತರಾಗಿದ್ದೀರಿ ಅದಲ್ಲದೆ ಆ ಕಲಾಮ್‌ನ


*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرُّ السُّمُوْمِ عَدَاوَۃُ الصُّلَحَاءِ

## ಸನ್ನಾವುಲ್ಲಾ ನನ್ನ ಭವಿಷ್ಯವಾಣಿಯನ್ನು ಸುಳ್ಳೆಂದು ತೋರಿಸಿಕೊಟ್ಟರೆ ಅವರಿಗೆ ಪ್ರತಿ ಭವಿಷ್ಯವಾಣಿಗೆ ಒಂದು ನೂರು ರೂಪಾಯಿಗಳ ಬಹುಮಾನ ಕೊಡುವೆನು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಸವಾಲು ನಾವು ಅವರ ಗ್ರಂಥ "ಇಜಾಝ್ ಅಹ್ಮದಿ ಅನುಬಂಧ ನುಝೂಲುಲ್ ಮಸೀಹ್" ರೂಹಾನಿ ಖಝಾಯನ್ ಸಂಪುಟ 19 ರಿಂದ ಪ್ರಸ್ತುತ ಪಡಿಸುತ್ತಿದ್ದೇವೆ. ಅಮೃತ್ಸರ ಜಿಲ್ಲೆಯಲ್ಲಿ ಮುದ್ ಎಂಬ ಒಂದು ಊರಿದೆ. ಅಲ್ಲಿ 29, 30 ಅಕ್ಟೋಬರ್ 1902 ರಂದು ಅಹ್ಮದಿಯರ ಮತ್ತು ಅಹ್ಮದಿಯೇತರ ನಡುವೆ ಒಂದು ಚರ್ಚೆ ನಡೆದಿತ್ತು. ಅಹ್ಮದಿಯೇತರರ ವತಿಯಿಂದ ಮೌಲ್ವಿ ಸನಾವುಲ್ಲಾ ಅಮೃತ್ಸರಿ ಚರ್ಚೆಗಾರರಾಗಿ ಅಹ್ಮದಿಯರ ವತಿಯಿಂದ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಸರ್ವರ್ ಶಾ ಸಾಹಿಬ್ ಮತ್ತು ಮೌಲ್ವಿ ಅಬ್ದುಲ್ಲ ಕಾಶ್ಮೀರಿ ಸಾಹಿಬ್ ಅವರನ್ನು ಚರ್ಚೆಗಾರರಾಗಿ ಖಾದಿಯಾನ್‌ನಿಂದ ಕಳುಹಿಸಿದ್ದರು. ಮೌಲ್ವಿ ಸನಾವುಲ್ಲಾ ಅಮೃತ್ಸರಿ ಚರ್ಚೆಯಲ್ಲಿ ಬಹಳ ಸುಳ್ಳು ಮತ್ತು ವಂಚನೆಯಿಂದ ವರ್ತಿಸಿದ್ದರು. ಅವರು ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಯಾವ ಭವಿಷ್ಯವಾಣಿಯು ಸತ್ಯವಾಗಲಿಲ್ಲ. ಅಲ್ಲದೇ ಹೀಗೂ ಹೇಳಿದರು. ನಾನು ಮಿರ್ಝಾ ಸಾಹಿಬ್‌ರ ಗ್ರಂಥ "ಇಜಾಝುಲ್ ಮಸೀಹ್ ರಂತೆಯೇ ಸಾಹಿತ್ಯಪೂರ್ಣ ಅರಬಿಯಲ್ಲಿ ಬರೆಯಬಲ್ಲೆನು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಸನಾವುಲ್ಲಾರ ಈ ಉಡಾಫೆಯ ಮಾತು. ಅವರ ಎಲ್ಲ ಭವಿಷ್ಯವಾಣಿಗಳು ಸುಳ್ಳಾದವು ಎಂಬುದಕ್ಕೆ ಅವರಿಗೆ ಸವಾಲು ಹಾಕಿದರು. ನೀವು ಭವಿಷ್ಯವಾಣಿಯನ್ನು ಸುಳ್ಳಾಯಿತು ಎಂದು ಸಾಬೀತುಪಡಿಸಿದರೆ, ಪ್ರತಿ ಭವಿಷ್ಯವಾಣಿಗೆ ಒಂದೊಂದು ನೂರು ರೂಪಾಯಿಯ ಬಹುಮಾನವನ್ನು ಪಡೆದುಕೊಳ್ಳಲಿ. ಮೌಲ್ವಿ ಸನಾವುಲ್ಲರ ಈ ಉಡಾಫೆಯ ಮಾತಾದ "ನಾನು ಇಜಾಝುಲ್ ಮಸೀಹ್ ನಂತಹ ಗ್ರಂಥ ಬರೆಯಬಲ್ಲೆನು" ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಸವಾಲು ಹಾಕಿದರು. ನಾನು ಅರಬಿಯಲ್ಲಿ ಒಂದು ಖಸೀದ ಬರೆಯುತ್ತೇನೆ. ಅವರು ಅದರಂತೆಯೇ ಖಸೀದ ನಿಗದಿಪಡಿಸಿದ ಅವಧಿಯಲ್ಲಿ ಬರೆದು ಪ್ರಕಟಿಸಲಿ. ನಾನು ಅವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ ಕೊಡುವೆನು. ಹತ್ತು ಸಾವಿರ ರೂಪಾಯಿಯ ಬಹುಮಾನ ವಿಷಯ ಕುರಿತು ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ವಿವರಿಸುವೆನು. ಈ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಮೊದಲು ಹಾಕಿದ ಸವಾಲಿನ ಕುರಿತು ವಿವರಿಸುವೆ. ಅದರಲ್ಲಿ ಅವರು ಮೌಲ್ವಿ ಸನಾವುಲ್ಲಾ ಅಮೃತ್ಸರಿ ಅವರಿಗೆ ಸವಾಲು ಹಾಕಿದರು. ನನ್ನ ಭವಿಷ್ಯವಾಣಿಯನ್ನು ಸುಳ್ಳೆಂದು ಸಾಬೀತು ಮಾಡಿ ತೋರಿಸಿದರೆ, ಯಾವೆಲ್ಲ ಭವಿಷ್ಯವಾಣಿಗಳನ್ನು ಅವರು ಸುಳ್ಳೆಂದು ಸಾಬೀತುಪಡಿಸುವರೋ ಆ ಎಲ್ಲ ಭವಿಷ್ಯವಾಣಿಗಳಿಗೆ ಒಂದೊಂದು ನೂರು ರೂಪಾಯಿಯ ಬಹುಮಾನ ಕೊಡುವೆನು.

### ಇಜಾಝ್ ಅಹ್ಮದಿ ಗ್ರಂಥ ಬರೆಯಲು ಕಾರಣ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಈ ವಿಷಯ ಬರೆಯುವ ಅಗತ್ಯವೇನಾಯಿತೆಂದರೆ ಅಮೃತ್ಸರ ಜಿಲ್ಲೆಯ ಮುದ್ ಗ್ರಾಮದಲ್ಲಿ ಮುನ್ಶಿ ಮುಹಮ್ಮದ್ ಯೂಸೂಫ್ ಸಾಹಿಬ್ ಅವರ ಒತ್ತಯದ ಮೇರೆಗೆ ನನ್ನ ಎರಡು ನಿಷ್ಠಾವಂತ ಮಿತ್ರರು ಒಂದು ಚರ್ಚೆಗೆ ಹೋದರು. ನಮ್ಮ ಕಡೆಯಿಂದ ಮೌಲ್ವಿ ಮುಹಮ್ಮದ್ ಸರ್ವರ್ ಸಾಹಿಬ್ ನಿಯುಕ್ತಗೊಂಡರು. ಮತ್ತು ಎದುರಾಳಿ ಪಕ್ಷದಿಂದ ಮೌಲ್ವಿ ಸನಾವುಲ್ಲಾ ಸಾಹಿಬ್ ಅವರನ್ನು ಅಮೃತ್ಸರ ಕರೆಯಿಸಿಕೊಳ್ಳಲಾಯಿತು. ಮೌಲ್ವಿ ಸನಾವುಲ್ಲಾ ಸಾಹಿಬ್ ಆ ಚರ್ಚೆಯಲ್ಲಿ ಸುಳ್ಳು ಮತ್ತು ವಂಚನೆಯಿಂದ ವರ್ತಿಸದಿರುತ್ತಿದ್ದರೆ ಈ ವಿಷಯ ಬರೆಯುವ ಅಗತ್ಯವಿರಲಿಲ್ಲ. ಆದರೆ ಮೌಲ್ವಿ ಸಾಹಿಬ್ ಅವರು ನನ್ನ ಭವಿಷ್ಯವಾಣಿಗಳನ್ನು ಧಿಕ್ಕರಿಸುವುದೇ ತನ್ನ ಕರ್ತವ್ಯ ಎಂದು ಭಾವಿಸಿದರು. ಆದುದರಿಂದ ಅಲ್ಲಾಹನು ನನಗೆ ಈ ವಿಷಯ ಬರೆಯಲು ಗಮನ ಸೆಳೆದನು. "ತಾಸಿಯಾ ರೂಯೆ ಶೂದ್ ಹರ್ ಕೆ ದರ್‌ಗಶ್ ಬಾಷದ್." (ಇಜಾಝ್ ಅಹ್ಮದಿ, ಝಮೀಮ ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–107)

### ಮೋಸಗಾರಿಕೆಯಲ್ಲಿ ಈ ಜನರು ಯಹೂದಿಯರನ್ನು ಸಹ ಹಿಂದಿಕ್ಕಿದರು.

ಮೌಲ್ವಿ ಸನಾವುಲ್ಲಾ ಅಮೃತ್ಸರಿ ಮತ್ತು ಅವರಂತಿರುವ ಮೌಲ್ವಿಗಳು ಹಗಲಿರುಳಿನ ಅದೇ ವೃತ್ತಿಯಾಗಿಬಿಟ್ಟಿತ್ತು. ಅಂದರೆ ಸುಳ್ಳಿನಿಂದ ಕಾರ್ಯ ಕೈಗೊಂಡು ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ಜನರಲ್ಲಿ ನಿಷ್ಠುರಪಡಿಸಬೇಕು. ಹೇಳುತ್ತಿದ್ದರು. ಮಸೀಹ್ ಮೌಊದ್(ಅ) ರವರ ಯಾವ ಭವಿಷ್ಯವಾಣಿಯು ಸತ್ಯವಾಗಲಿಲ್ಲ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಯಹೂದಿಯರಂತೆ ಸತ್ಯವನ್ನು ಮರೆಮಾಚಿ ಅಜ್ಞಾನಿಗಳಾದ ಜನರಲ್ಲಿ ಸಂಶಯ ಉಂಟಾಗುವಂತೆ ಭಾಷಣ ಮಾಡುತ್ತಾರೆ. ಜನರು ಈ ಪೈಕಿ ಯಹೂದಿಯರನ್ನು ಸಹ ಹಿಂದಿಕ್ಕಿದ್ದಾರೆ. ಈ ಜನರ ಮಾತು ಮಾತಿನಲ್ಲಿ ಸುಳ್ಳು ಹೇಳುತ್ತಾರೆ. ಮೌಲ್ವಿ ಸನಾವುಲ್ಲಾ ಮುದ್ ಗ್ರಾಮದಲ್ಲಿ ಚರ್ಚೆಯಲ್ಲಿ ಅದನ್ನೇ ಮಾಡಿದ್ದಾರೆ. ಮೋಸದಿಂದ ಹೇಳಿದರು. ಈ ವ್ಯಕ್ತಿ ತನ್ನ ಒಂದು ಭವಿಷ್ಯವಾಣಿಯಲ್ಲಿ ಬರೆದಿದ್ದನು. ಪುತ್ರ ಜನಿಸುವನು ಎಂದು. ಆದರೆ ಪುತ್ರಿ ಜನಿಸಿದೆ. ನಂತರ ಹುಟ್ಟಿದ ಪುತ್ರನು ಮರಣ ಹೊಂದಿದನು ಮತ್ತು ಭವಿಷ್ಯವಾಣಿ ಸುಳ್ಳಾಯಿತು.

### ಇಂತಹ ಅಪಾದನೆ ಒಂದು ಹುಚ್ಚನು ಮಾಡುವನು ಅಥವಾ ಅತ್ಯಂತ ಕೀಳುಮಟ್ಟದ ಮನುಷ್ಯನು, ಅವನಲ್ಲಿ ದೇವಭಯ ಇರದು.

ಮೇಲ್ಕಾಣಿಸಿದ ಅಪಾದನೆಯ ಉತ್ತರವನ್ನು ನೀಡುತ್ತಾ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದರ ಸಾರಾಂಶ ಹೀಗಿದೆ. ಅಲ್ಲಾಹನಿಂದ ಈ ಮೊದಲ ಬಸಿರಿನಲ್ಲೇ ಪುತ್ರನಾಗುವನು ಎಂಬ ದಿವ್ಯವಾಣಿ ದಿಟವಾಗಿಯೂ ಆಗಿರಲಿಲ್ಲ. ಅಥವಾ ಎರಡನೇ ಬಸಿರಿನಲ್ಲಿ ಬದಲು ಒಂದು ಅವಧಿ ನಿಗದಿಪಡಿಸಲಾಗಿತ್ತು. ಆ ಅವಧಿಯಲ್ಲಿ ಪುತ್ರನು ಹುಟ್ಟುವನು. ಅದು ಯಾವುದೇ ಬಸಿರಾಗಲಿ, ಅವರು ಹೇಳುತ್ತಾರೆ.

ಈಗ ಆ ಜನರಿಂದ ಯಾರು ಕೇಳಬೇಕು. ನಿಮ್ಮ ಮಾತುಗಳಲ್ಲಿ ಯಾವುದೆ ಸುಳ್ಳು ಇಲ್ಲ ಎಂದಾದರೆ ಅವರು ಆ ದಿವ್ಯವಾಣಿ ಪ್ರಕಟಪಡಿಸಲಿ, ಅದರಲ್ಲಿ ಅಲ್ಲಾಹನು ಈಗ ಆಗುವ ಮಗುವೇ ಆ ಪುತ್ರನಾಗುವನು ಎಂದು ಅಥವಾ ಹೀಗೆ ಹೇಳಿರಬೇಕು. ಪುತ್ರಿಯ ನಂತರ ಆಗುವ ಮಗು ವಾಗ್ದತ್ತ ಪುತ್ರನಾಗುವನು ಎಂದು. ಬೇರೆ ಅಲ್ಲ ಅದು ಇದೇ ಮಗುವಾಗಿರುವುದು ಎಂದು. ನಾವು ಭಾವಿಸಿಕೊಂಡರೂ ದೇವವಾಣಿ ಆಗದೇ ಇದ್ದರೆ ನಮ್ಮ ಭಾವನೆಗಳಿಗೆ ಯಾವ ಬೆಲೆಯಿದೆ. ಹಝ್ರತ್ ರಸೂಲುಲ್ಲಾಹ್(ಸ) ತನ್ನ ಮನಸ್ಸಿನಲ್ಲಿ ಭಾವಿಸಿಕೊಂಡಿದ್ದರು. ಯಾಮಾಯ ಕಡೆ ನನ್ನ ಹಿಝ್ರತ್ ಆಗುವುದು ಎಂದು. ಆದರೆ ಆ ಭಾವನೆ ಸರಿ ಆಗಲಿಲ್ಲ. ಮದೀನಾ ಕಡೆ ಹಿಝ್ರತ್ ಮಾಡಬೇಕಾಯಿತು. ನನ್ನ ಭವಿಷ್ಯವಾಣಿಯಲ್ಲಿ ಮೊದಲ ಬಸಿರಿನಲ್ಲೇ ಆ ಮಗು ಹುಟ್ಟುವುದು ಎಂಬ ದೇವವಾಣಿಯ ಶಬ್ದಗಳು ಇರಬೇಕಿತ್ತು. ಆದರೆ ಯಾರಾದರೂ ಆ ಶಬ್ಧಗಳನ್ನು ತೋರಿಸಬಹುದಾದರೆ ತೋರಿಸಲಿ. ನೋಡಿರಿ. ಹಝ್ರತ್ ರಸೂಲುಲ್ಲಾಹ್(ಸ) ರವರ ಆಗಮನದ ಬಗ್ಗೆ ಬನೀ ಈಸ್ರಾಇಲರ ಹಲವು ಪ್ರವಾದಿಗಳು ಭವಿಷ್ಯವಾಣಿ ಮಾಡಿದ್ದರು. ಆದರೆ ಎಷ್ಟೋ ಪ್ರವಾದಿಗಳು ಆಗಮಿಸಿದ ನಂತರ ಎಲ್ಲರ ಕೊನೆಯಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಆಗಮಿಸಿದರು. ಈಗೇನು ಯಾರಾದರೂ ಭವಿಷ್ಯವಾಣಿಗಳು ಸುಳ್ಳಾದವು ಎಂದು ಆಪಾದನೆ ಮಾಡಲು ಸಾಧ್ಯವೇ? ಏಕೆಂದರೆ ಹಝ್ರತ್ ರಸೂಲುಲ್ಲಾಹ್(ಸ) ಮೂಸಾ(ಅ) ನಂತರ ಸರಿಯಾಗಿ ಎರಡು ಸಾವಿರ ವರ್ಷಗಳ ನಂತರ ಆಗಮಿಸಿದರು. ಆದರೆ ತೌರಾತಿನ ಭವಿಷ್ಯವಾಣಿ ಅನ್ವಯ ಯಹೂದಿಯರು ಆ ಪ್ರವಾದಿ ಬೇಗನೇ ಆಗಮಿಸುವರು ಎಂದು ನಂಬಿದ್ದರು. ಆದರೆ ಹಾಗೆ ಆಗಲಿಲ್ಲ. ಬದಲು ನಡುವೆ ಹಲವು ಪ್ರವಾದಿಗಳು ಆಗಮಿಸಿದರು. ಹಾಗೆ ಇಂತಹ ಅಪಾದನೆ ಒಂದು ಹುಚ್ಚರು ಮಾಡುವರು ಇಲ್ಲ ಅತ್ಯಂತ ಕೀಳುಮಟ್ಟದ ದೇವಭಯ ಇಲ್ಲದವರು ಮಾಡುವರು.

ಅವರುಗಳು ಸತ್ಯವಾದಿಗಳಾಗಿದ್ದರೆ ಖಾದಿಯಾನಿಗೆ ಬಂದು ಯಾವುದೇ ಭವಿಷ್ಯವನ್ನು ಸುಳ್ಳಾಗಿದ್ದು ಸಾಬೀತುಪಡಿಸಲಿ,

### ಅವರಿಗೆ ಪ್ರತಿಯೊಂದು ಭವಿಷ್ಯವಾಣಿಗೆ ಒಂದೊಂದು ನೂರು ರೂಪಾಯಿಗಳಂತೆ ಬಹುಮಾನ ನೀಡುವೆನು, ಅವರು ಬರುವ ಹೋಗುವ ಖರ್ಚು ಬೇರೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದೇ ಮಾತುಗಳು ಮೌಲ್ವಿ ಸನಾವುಲ್ಲಾ 'ಮುದ್' ಎಂಬ ಸ್ಥಳದಲ್ಲಿ ಚರ್ಚೆಯಲ್ಲಿ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನು ಎಲ್ಲ ಆತಂಕಗಳನ್ನು ಮತ್ತು ಭಯಗಳನ್ನು ನೆಮ್ಮದಿಯನ್ನಾಗಿ ಬದಲಾಯಿಸಿದನು.**

**ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯ ವಿಶ್ವಾಸ ಹಾಗೂ ನಂಬಿಕೆಯನ್ನು ಬೆಳೆಸಲಿ ಮತ್ತು ಜಲ್ಸದ ಪರಿಣಾಮಗಳು ಶಾಶ್ವತವಾಗಿರಲಿ ಮತ್ತು ತಾತ್ಕಾಲಿಕವಾಗಿರಬಾರದು**

**ಜಲ್ಸಾ ತಯಾರಿಯಿಂದ ಹಿಡಿದು ಮುಕ್ತಾಯದವರೆಗೆ ನಿಸ್ವಾರ್ಥವಾಗಿ ಶ್ರಮಿಸಿದ ಎಲ್ಲ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.**

**ಒಂದು ಒಗ್ಗಟ್ಟು ಇತ್ತು. ಅದರ ದೃಶ್ಯವನ್ನು ನಾವು ಎಂ.ಟಿ.ಎ.ದ ಕ್ಯಾಮೆರದ ಕಣ್ಣಿನ ಮೂಲಕ ನೋಡಿದೆವು. ಇದು ಅಲ್ಲಾಹನ ವಿಶಿಷ್ಟ ವರದಾನವಾಗಿದೆ. ಎಂ.ಟಿ.ಎ.ದ ಕಾರ್ಯಕರ್ತರು ಇದಕ್ಕಾಗಿ ಕೃತಜ್ಞತೆಗೆ ಅರ್ಹರಾಗಿರುವರು. ಅವರು ಅಹ್ಮದಿಯಾ ಜಮಾಅತಿನ ಐಕ್ಯವನ್ನು ಎಂ.ಟಿ.ಎ.ದ ಮೂಲಕ ಸಂಪೂರ್ಣ ಲೋಕಕ್ಕೆ ತೋರಿಸಿ ವಿರೋಧಿಗಳ ಬಾಯಿ ಮುಚ್ಚಿಸಿದರು.**

**ಈ ಪ್ರೇಮ ಸ್ವತಃ ಅಲ್ಲಾಹನು ಜನರ ಹೃದಯಗಳಲ್ಲಿ ಹಾಕಿರುವನು ಎಂದು ಅನಿಸುತ್ತಿತ್ತು. ಏಕೆಂದರೆ, ಅದರಲ್ಲಿ ತೋರಿಕೆಯ ಯಾವುದೇ ಅಂಶವಿರಲಿಲ್ಲ. (ಅಹ್ಮದಿಯೇತರ ವಿದ್ವಾಂಸ).**

**ಯಾರು ಒಪ್ಪಿದರೂ ಇಲ್ಲದಿದ್ದರೂ ಇಂದು ನೈಜ ಇಸ್ಲಾಂ ಅಹ್ಮದಿಯ್ಯತೇ ಆಗಿದೆ. ಈ ಸತ್ಯವನ್ನು ಅರಿಯುವ ಮತ್ತು ಅದರಲ್ಲಿ ಬಂದು ಸೇರುವ ದಿನ ದೂರವಲ್ಲ. (ಅಹ್ಮದಿಯೇತರ ಸ್ನೇಹಿತ).**

**ಇಸ್ಲಾಂ ಧರ್ಮವು ಮಹಿಳೆಯರಿಗೆ ನೀಡಿರುವ ಹಕ್ಕುಗಳನ್ನು ಕ್ರಿಶ್ಚಿಯನ್ ಧರ್ಮ ನೀಡಿಲ್ಲ ಎಂದು ಹೇಳಲು ನಾನು ನಾಚಿಕೆಪಡುವುದಿಲ್ಲ. (ಕ್ರಿಶ್ಚಿಯನ್ ಪಾದ್ರಿ)**

**ಹಝ್ರತ್ ಮುಹಮ್ಮದ್(ಸ) ಅವರು ನಮಗೆ ನೀಡಿದ ಇಸ್ಲಾಂ ಧರ್ಮದ ನಿಜವಾದ ಬೋಧನೆಯನ್ನು ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸಿದಂತೆ, ಇದು ನನಗೆ ಜಮಾಅತ್‌ನ ಗುರುತಾಗಿದೆ. (ಹಂಬಲಿ ಇಮಾಮ್)**

**ಈ ಜಲ್ಸದಿಂದ, ಈ ದೈವಿಕ ಜಮಾಅತ್ತಿನಲ್ಲಿ ನನ್ನ ನಂಬಿಕೆ ಹೆಚ್ಚಾಗಿದೆ (ಇಂಡೋನೇಷಿಯನ್ ನವ ಅಹ್ಮದಿ)**

**ಈ ಜಾಗತಿಕ ಜಲ್ಸ ಸಾಲಾನವು ಜಮಾಅತ್‌ನಲ್ಲಿ ಏಕತೆ ಇದೆ ಎಂಬುದಕ್ಕೆ ಪುರಾವೆಯಾಗಿದೆ, ಇಡೀ ಪ್ರಪಂಚದ ಅಹ್ಮದಿಯರು ಕಾಲಘಟ್ಟದ ಖಲೀಫರ ಕೈಯಲ್ಲಿ ಒಟ್ಟುಗೂಡಿದ್ದಾರೆ. (ಅಲ್ಬಾನಿಯನ್ ನವ ಅಹ್ಮದಿ)**

**ಜನ ತಮ್ಮ ನಾಯಕನ ಮಾತನ್ನು ಇಷ್ಟು ಪ್ರೀತಿ ಗೌರವದಿಂದ ಕೇಳುವ ಇಂತಹ ಕಾರ್ಯಕ್ರಮವನ್ನು ನಾನು ಇಲ್ಲಿಯವರೆಗೂ ನೋಡಿಲ್ಲ. (ಅಹ್ಮದಿಯೇತರ ಸ್ನೇಹಿತ)**

**ಈ ಸಮಯದಲ್ಲಿ, ಯಾರಾದರೂ ಮುಸ್ಲಿಂ ಉಮ್ಮಾವನ್ನು ಉಳಿಸಲು ಸಾಧ್ಯವಾದರೆ, ಅದು ಅಹ್ಮದೀಯ ಖಿಲಾಫತ್ ಆಗಿದೆ ಮತ್ತು ಇಂದು ನಾನು ಅಹ್ಮದಿಯತ್ತಿಗೆ ಸೇರಲು ಘೋಷಿಸುತ್ತೇನೆ. (ಜಲ್ಸದ ಸಮಯದಲ್ಲಿ ಅಹ್ಮದಿಯತ್ತನ್ನು ಸ್ವೀಕರಿಸುವ ಮಹಿಳೆ)**

**ಖಲೀಫತುಲ್ ಮಸೀಹ್ ಅವರ ಭಾಷಣವು ಪವಿತ್ರ ಖುರ್‌ಆನ್‌ನ ಆಯತ್‌ಗಳು ಮತ್ತು ಪ್ರವಾದಿ(ಸ) ಅವರ ಜೀವನ ಮತ್ತು ತರ್ಕಬದ್ಧ ವಾದಗಳೊಂದಿಗೆ ಸಜ್ಜುಗೊಂಡಿದೆ. (ಅಹ್ಮದಿಯ್ಯತ್‌ನ ಬಗ್ಗೆ ಕಲಿಯುತ್ತಿರುವ ಅಲ್ಬಾನಿಯನ್ ಸ್ನೇಹಿತ)**

**ಬ್ರಿಟನ್‌ನ 2022ರ ಜಲ್ಸ ಸಾಲಾನದ ಸಂದರ್ಭದಲ್ಲಿ ಪ್ರಪಂಚದಾದ್ಯಂತದ ಜಲ್ಸಾಗೆ ಸೇರಿದ ಅಹ್ಮದಿ ಮತ್ತು ಅಹ್ಮದಿಯೇತರ ಅತಿಥಿಗಳ ಅನಿಸಿಕೆಗಳು.**

**ಮೂರು ದಿವಂಗತ ಶ್ರೀಮತಿ ನುಸ್ರತ್ ಕುದ್ರತ್ ಸುಲ್ತಾನಾ ಸಾಹಿಬಾ ಪತ್ನಿ ಮಕ್ರಂ ಕುದ್ರತುಲ್ಲಾ ಅದ್ನಾನ್ ಸಾಹಿಬ್ ಕೆನಡಾ, ಚೌಧರಿ ಲತೀಫ್ ಅಹ್ಮದ್ ಜುಮಟ್ ಸಾಹಿಬ್ (ವಕ್ಫ್-ಐ-ಜಿಂದಗಿ) ಮತ್ತು ಮಾನ್ಯ ಮುಷ್ತಾಕ್ ಅಹ್ಮದ್ ಆಲಂ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-08-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

إِيَّاكَ نَعْبُدُ وَإِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ .

ಅಲ್‌ಹಮ್ದುಲಿಲ್ಲಾಹ್, ಅಲ್ಲಾಹನು ನಮಗೆ ಬ್ರಿಟನಿನ ಜಲ್ಸ ಸಾಲಾನ ನಡೆಸಲು ಸೌಭಾಗ್ಯ ನೀಡಿದನು. ಮೂರು ದಿನಗಳಲ್ಲಿ ಅಲ್ಲಾಹನು ಅನುಗ್ರಹಗಳು ವರ್ಷಿಸಿದ್ದಾಗಿ ನಾವು ನೋಡಿದೆವು. ಈ ವರ್ಷದ ಆರಂಭದಲ್ಲಿಯೂ ಕೋವಿಡ್‌ನಿಂದಾಗಿ ಜಲ್ಸಾವನ್ನು ಕಳೆದ ವರ್ಷದಂತೆ ಚಿಕ್ಕ ಪ್ರಮಾಣದಲ್ಲಿ ನಡೆಸಬೇಕು ಎಂದು ಭಾವಿಸಲಾಗಿತ್ತು, ಆದರೆ ಕಳೆದ ತಿಂಗಳು ಬ್ರಿಟನ್‌ನ ಎಲ್ಲಾ ಅಹ್ಮದೀಯರನ್ನು ಜಲ್ಸದಲ್ಲಿ ಭಾಗವಹಿಸಲು ಅವಕಾಶ ನೀಡಲಾಯಿತು. ಮೊದಮೊದಲು ಈ ನಿರ್ಧಾರದ ಬಗ್ಗೆ ವ್ಯವಸ್ಥಾ ಮಂಡಳಿಯವರು ಸ್ವಲ್ಪ ಚಿಂತಿತರಾಗಿದ್ದರು, ಆದರೆ ಸಂತರ, ಅವರು ತಮ್ಮ ಸಿದ್ಧತೆಗಳನ್ನು ಪ್ರಾರಂಭಿಸಿದರು ಮತ್ತು ನಾನು ಹೇಳಿದಂತೆ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳನ್ನು ನಾವು ನೋಡಿದ್ದೇವೆ.

ಜಲ್ಸಗಾಗಿ ವರ್ಷವಿಡೀ ಬಹಳವಾಗಿ ಕಾಯಲಾಗುತ್ತದೆ. ಅದರ ವ್ಯವಸ್ಥಾಪರಿಗೆ ಅದಕ್ಕಾಗಿ ಬಹಳ ಸಿದ್ಧತೆಗಳನ್ನು ಕೂಡ ನಡೆಸಬೇಕಾಗಿ ಬರುತ್ತದೆ. ಆದರೆ ಜಲ್ಸ ಆರಂಭವಾದರೆ ಈ ಮೂರು ದಿನಗಳು ಎಷ್ಟು ಬೇಗನೇ ಕಣ್ಣು ಮಿಟುಕಿಸುವುದರೊಳಗೆ ದಾಟಿ ಹೋಗುತ್ತದೆ ಎಂದು ಗೊತ್ತೇ ಆಗುವುದಿಲ್ಲ. ಈ ವರ್ಷ ಜನರಿಗೂ ಮತ್ತು ನನಗೂ ಅನೇಕ ಕಾರಣದಿಂದ ಕೆಲವು ಆತಂಕಗಳಿದ್ದುವು. ಕೆಲವರು ಪತ್ರಗಳನ್ನು ಬರೆದು ತಮ್ಮ ಚಿಂತೆಗಳನ್ನು ವ್ಯಕ್ತಪಡಿಸಿಕೊಂಡಿದ್ದರು. ನಾನು ಮತ್ತು ಜಮಾಅತಿನ

ಸದಸ್ಯರು ಸ್ವತಃ ದುಆಗಳನ್ನು ಮಾಡುತ್ತಿದ್ದೆವು. ಆದರೆ ಅಲ್ಲಾಹನು ಎಲ್ಲ ಆತಂಕಗಳನ್ನು ಮತ್ತು ಭಯಗಳನ್ನು ನೆಮ್ಮದಿಯನ್ನಾಗಿ ಬದಲಾಯಿಸಿದನು.

ಹರಡಿರುವ ಕೋವಿಡ್ ಸಾಂಕ್ರಾಮಿಕ ರೋಗವು ಆತಂಕದ ಒಂದು ಕಾರಣವಾಗಿತ್ತು. ಹೇಗಿದ್ದರೂ ಅದರ ಪ್ರಭಾವ ಭಾಗವಹಿಸಿದ ಕೆಲವರ ಮೇಲೆ ಆಗಿರಬಹುದು. ಆದರೆ ಸಾಮಾನ್ಯವಾಗಿ ಅಲ್ಲಾಹನ ಬಹಳ ದೊಡ್ಡ ಕೃಪೆಯಿತ್ತು.

ಹೇಗಿದ್ದರೂ ಈಗ ಜಲ್ಸಗೆ ಸಂಬಂಧಪಟ್ಟು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಜಲ್ಸದ ಮುಂದಿನ ಖುತ್ಬದಲ್ಲಿ ಕಾರ್ಯಕರ್ತರಿಗೆ ಧನ್ಯವಾದಗಳನ್ನು ಕೂಡ ಅರ್ಪಿಸುತ್ತೇನೆ. ಭಾಗವಹಿಸಿದ ಅತಿಥಿಗಳ ಅನಿಸಿಕೆಗಳನ್ನು ಕೂಡ ಹೇಳುತ್ತೇನೆ. ಜಲ್ಸಗೆ ಸಂಬಂಧಿಸಿ ಅಲ್ಲಾಹನ ಅನುಗ್ರಹಗಳ ಬಗ್ಗೆಯೂ ಹೇಳುತ್ತೇನೆ.

ಜಲ್ಸದ ಸಿದ್ಧತೆಯಿಂದ ಮುಕ್ತಾಯದ ತನಕ ನಿಸ್ವಾರ್ಥರಾಗಿ ಕೆಲಸ ಮಾಡಿದ ಮತ್ತು ಈಗಲೂ ಯಾವುದಾದರೂ ರೀತಿಯಲ್ಲಿ ಮುಂದುವರೆಯುತ್ತಿರುವ ಮುಕ್ತಾಯದ ಕೆಲಸವನ್ನು ಮಾಡುತ್ತಿರುವ ಎಲ್ಲ ಕಾರ್ಯಕರ್ತರಿಗೆ ಮೊದಲು ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜಲ್ಸದ ವೇಳೆ ಬೇರೆ ಬೇರೆ ವಿಭಾಗಗಳಲ್ಲಿ ಮಹಿಳೆ ಮತ್ತು ಪುರುಷರಾದ ಸೇವಕರು ಸಾಮಾನ್ಯವಾಗಿ ತಮ್ಮ ಸಾಮರ್ಥ್ಯಕ್ಕೆ ಅನುಸಾರ ಉತ್ತಮ ಕೆಲಸಗಳನ್ನು ಮಾಡಿದ್ದರು. ಅದಕ್ಕಾಗಿ ಭಾಗವಹಿಸಿದ ಎಲ್ಲರೂ ಧನ್ಯರಾಗಿರಬೇಕು.

ಇದೇ ಇಸ್ಲಾಮಿನ ನೈತಿಕ ಗುಣವಾಗಿದೆ. ನಿಮಗೆ ಯಾವುದೇ ರೀತಿಯಲ್ಲಿ ಪ್ರಯೋಜನಕ್ಕೆ ಕಾರಣವಾದವರಿಗೆ ಕೃತಜ್ಞತೆ ಅರ್ಪಿಸಬೇಕು. ದಾಸರಿಗೆ ಅರ್ಪಿಸುವ ಕೃತಜ್ಞತೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಕಡೆಗೆ ಕೊಂಡು ಹೋಗುವುದು. ಮಕ್ಕಳು, ದೊಡ್ಡವರು, ಮಹಿಳೆಯರು ಹುಡುಗಿಯರು ಸೇವೆ ಸಲ್ಲಿಸಲು ಪ್ರಯತ್ನಿಸಿದ್ದರು. ಕೆಲವು ದೌರ್ಬಲ್ಯಗಳು ಮತ್ತು ಕೊರತೆಗಳು ಕಾಣಬಹುದಾಗಿತ್ತು. ಆದರೆ ಇಷ್ಟು ದೊಡ್ಡ ವ್ಯವಸ್ಥೆಯಲ್ಲಿ ಇಂತಹ ದೌರ್ಬಲ್ಯಗಳು ಸಂಭವಿಸುತ್ತವೆ. ಆದರೆ ವ್ಯವಸ್ಥಾಪಕರು ಈ ದೌರ್ಬಲ್ಯಗಳು ಮತ್ತು ಕೊರತೆಗಳನ್ನು ದೂರ ಮಾಡಬೇಕು. ಉದಾಹರಣೆಗೆ ಲಜ್ನದ ಭೋಜನ ವಿಭಾಗದ ಬಗ್ಗೆ ಕೆಲವು ದೂರುಗಳು ಮತ್ತು ಬೇರೆ ಕೆಲವು ಸಂಗತಿಗಳು ಇವೆ. ಈ ಕುರಿತು ಜನರ ಪತ್ರಗಳು ಬಂದಿವೆ. ನಾನು ಆಗಲೇ ಅವುಗಳನ್ನು ಸಂಘಟಕರಿಗೆ ಕಳುಹಿಸುತ್ತಿದ್ದೇನೆ. ಇದರ ಪ್ರಕಾರ ಅವಲೋಕನ ನಡೆಸಿ ತಮ್ಮ ರೆಡ್‌ಬುಕ್‌ನಲ್ಲಿ ಈ ಕೊರತೆಗಳನ್ನು ಬರೆದು ಮುಂದಿನ ವರ್ಷ ಪ್ರತಿಯೊಂದು ವಿಭಾಗದಲ್ಲಿ ಉತ್ತಮ ವ್ಯವಸ್ಥೆ ಮಾಡಲು ಪ್ರಯತ್ನಿಸಬೇಕು.

ಆದರೆ ಹೇಗಿದ್ದರೂ ಸಾಮಾನ್ಯವಾಗಿ ಸೇವಕರು ಬಹಳ ಉತ್ತಮವಾಗಿ ಕೆಲಸ ಮಾಡಿದ್ದರು. ಮಕ್ಕಳೂ ತಮ್ಮ ಕರ್ತವ್ಯಗಳನ್ನು ಪೂರೈಸಿದ್ದಾರೆ. ಹೇಗಿದ್ದರೂ, ನಾನು ಅವರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಎಂ.ಟಿ.ಎ. ಕೂಡ ಬಹಳ ಉತ್ತಮ ಪ್ರಸಾರ ನೀಡಿತ್ತು. ಈ ಬಾರಿ ಸ್ಟುಡಿಯೋ ಕೂಡ ಸಂಪೂರ್ಣವಾಗಿ ಅವರು ಸ್ವತಃ ತಯಾರು ಮಾಡಿದ್ದರು. ಇದರಿಂದ ಅನೇಕ ಸಾವಿರ ಪೌಂಡ್‌ಗಳ ಉಳಿತಾಯವಾಯಿತು. ಈ ವರ್ಷ ಅನೇಕ ಅಭಿವೃದ್ಧಿ ಹೊಂದಿದ ಮತ್ತು ಹೊಂದದ ದೇಶಗಳನ್ನು ಜಲ್ಸದ ಕಾರ್ಯಕ್ರಮದ ಸಂದರ್ಭದಲ್ಲಿ ಸೇರಿಸಲಾಗಿತ್ತು. ಇದರಿಂದ ಇಲ್ಲಿ ಕುಳಿತುಕೊಂಡ ಜನರು ಕೂಡ ಇತರ ದೇಶಗಳಲ್ಲಿ ನೆಲೆಸಿರುವ ತಮ್ಮ ಸಹೋದರರನ್ನು ನೋಡುತ್ತಿದ್ದರು.

ಒಂದು ಒಗ್ಗಟ್ಟು ಇತ್ತು. ಅದರ ದೃಶ್ಯವನ್ನು ನಾವು ಎಂ.ಟಿ.ಎ.ದ ಕ್ಯಾಮೆರದ ಕಣ್ಣಿನ ಮೂಲಕ ನೋಡಿದೆವು. ಇದು ಅಲ್ಲಾಹನ ವಿಶಿಷ್ಟ ವರದಾನವಾಗಿದೆ. ಎಂ.ಟಿ.ಎ.ದ ಕಾರ್ಯಕರ್ತರು ಇದಕ್ಕಾಗಿ ಕೃತಜ್ಞತೆಗೆ ಅರ್ಹರಾಗಿರುವರು. ಅವರು ಅಹ್ಮದಿಯಾ ಜಮಾಅತಿನ ಐಕ್ಯವನ್ನು ಎಂ.ಟಿ.ಎ.ದ ಮೂಲಕ ಸಂಪೂರ್ಣ ಲೋಕಕ್ಕೆ ತೋರಿಸಿ ವಿರೋಧಿಗಳ ಬಾಯಿ ಮುಚ್ಚಿಸಿದರು.

ಈಗ ನಾನು ಕೆಲವು ಸ್ವಂತ ಮತ್ತು ಅನ್ಯರ ಅನಿಸಿಕೆಗಳ ಬೆಳಕಿನಲ್ಲಿ ಅಲ್ಲಾಹನ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸುವೆನು. ಜಲ್ಸದ ಮೂಲಕ ಅಲ್ಲಾಹನು ಹೇಗೆ ಲೋಕದಲ್ಲಿ ಇಸ್ಲಾಮಿನ ಸಂದೇಶವನ್ನು ತಲುಪಿಸಿದೆ ಎಂದು ಹೇಳುತ್ತೇನೆ.

ನೈಜರ್‌ನ ಅಬೂಬಕರ್ ಸೀನಿ ಸಾಹಿಬ್ ಎಂಬ ಹೆಸರಿನ ಒಬ್ಬ ಅಹ್ಮದಿಯೇತರ ಪಂಡಿತ ಇದ್ದಾರೆ. ಅವರು ನಿಯಾಮೆ ಪಟ್ಟಣದಲ್ಲಿರುವ ಒಂದು ಮಸೀದಿಯ ಇಮಾಮ್ ಸಹ ಆಗಿರುವರು. ಅವರು ಹೀಗೆ ಹೇಳುತ್ತಾರೆ: ಜನರಿಗೆ ಖಲೀಫತುಲ್ ಮಸೀಹ್‌ರೊಂದಿಗೆ ಇರುವ ಪ್ರೀತಿ ಮತ್ತು ಪ್ರೇಮದ ಸಂಬಂಧ ಮತ್ತು ಯಾವ ರೀತಿಯಲ್ಲಿ ಜನರು ಖಲೀಫತುಲ್ ಮಸೀಹ್‌ರ ಒಂದು ಸೂಚನೆಗೆ ಪರಿಪೂರ್ಣ ಅನುಸರಣೆ ತೋರಿಸುತ್ತಿದ್ದರು ಹಾಗೂ ಭಾಷಣಗಳ ವೇಳೆ ಪರಿಪೂರ್ಣ ಮೌನವಾಗಿ ಇದ್ದರು ಎಂಬುದು ನನ್ನನ್ನು ಅತಿಯಾಗಿ ಪ್ರಭಾವಿತಗೊಳಿಸಿದೆ. ಈ ಪ್ರೇಮ ಸ್ವತಃ ಅಲ್ಲಾಹನು ಜನರ ಹೃದಯಗಳಲ್ಲಿ ಹಾಕಿರುವನು ಎಂದು ಅನಿಸುತ್ತಿತ್ತು. ಏಕೆಂದರೆ, ಅದರಲ್ಲಿ ತೋರಿಕೆಯ ಯಾವುದೇ ಅಂಶವಿರಲಿಲ್ಲ.

ಬುರ್ಕಿನಾಫಾಸೋದ ಒಬ್ಬ ಅಹ್ಮದಿಯೇತರ ಸಹೋದರನಾದ ಇಸ್‌ಹಾಖ್ ಸಾಹಿಬ್ ಹೇಳುತ್ತಾರೆ: ನಿಮ್ಮ ಜಲ್ಸ ಸಾಲಾನ ಬಹಳ ವೈಭವಶಾಲಿಯಾಗಿತ್ತು. ಇದರ ಉದಾಹರಣೆ ಸಿಗುವುದಿಲ್ಲ. ಇಷ್ಟು ಜನರು ಒಂದೆಡೆ ಒಟ್ಟು ಸೇರುವುದು ಮತ್ತು ಒಬ್ಬ ಇಮಾಮನ್ನು ಅನುಸರಿಸುವುದು ಪವಾಡಕ್ಕೆ ಕಡಿಮೆಯೇನೂ ಅಲ್ಲ. ಈ ಜಲ್ಸ ಅತುಲ್ಯವಾಗಿದೆ. ಯಾರು ಒಪ್ಪಿದರೂ ಇಲ್ಲದಿದ್ದರೂ ಇಂದು ನೈಜ ಇಸ್ಲಾಂ ಅಹ್ಮದಿಯ್ಯತೇ ಆಗಿದೆ. ಈ ಸತ್ಯವನ್ನು ಅರಿಯುವ ಮತ್ತು ಅದರಲ್ಲಿ ಬಂದು ಸೇರುವ ದಿನ ದೂರವಲ್ಲ.

ಇದು ಅನ್ಯ ಮುಸ್ಲಿಮರ ಅನಿಸಿಕೆಗಳಾಗಿವೆ ಮತ್ತು ಸರ್ವಶಕ್ತನಾದ ಅಲ್ಲಾಹನು ಅವರನ್ನು ಈ ಕಡೆಗೆ ತಿರುಗಿಸುತ್ತಿದ್ದಾನೆ.

ನಂತರ ಫ್ರಂಚ್ ಗಿಯಾನದಲ್ಲಿ ಒಂದು ಸಿರಿಯನ್ ಅಹ್ಮದಿಯೇತರ ವ್ಯಕ್ತಿಯಿರುವರು. ಅವರು ಮೊದಲ ಬಾರಿ ಜಲ್ಸ ನೋಡಿದ್ದರು. ಅರಬಿಗಳಿಗೆ ಮಸೀದಿಯಲ್ಲಿ ಎಂ.ಟಿ.ಎ. ಅಲ್‌ಅರಬಿಯದ ಮೂಲಕ ಕಾರ್ಯಕ್ರಮಗಳನ್ನು ನೋಡಲು ವ್ಯವಸ್ಥೆಯಿತ್ತು. ಅವರು ಹೇಳುತ್ತಾರೆ: ನಾನು ಮೊದಲ ಬಾರಿಗೆ ಜಮಾಅತಿನ ಸಂದೇಶವನ್ನು ಕೇಳುತ್ತಿದ್ದೇನೆ. ಮೊದಲ ಬಾರಿ ನಿಮ್ಮ ಖಲೀಫರ ಭಾಷಣವನ್ನು ಆಲಿಸುತ್ತಿದ್ದೇನೆ. ಈ ರೀತಿಯಾಗಿ ಇಸ್ಲಾಮಿನ ನೈಜ ಸಂದೇಶವನ್ನು ಲೋಕದಲ್ಲಿ ತಲುಪಿಸುವ ಮತ್ತು ಒಬ್ಬ ಖಲೀಫರ ಬೈಅತ್ ಮಾಡಿ ಲೋಕದೆಲ್ಲಡೆ ಕೆಲಸ ಮಾಡುವ ಒಂದು ಸಂಘಟನೆ ಮುಸ್ಲಿಮರಲ್ಲಿ ಇದೆ ಎಂಬುದರಿಂದ ನಾನು ಬಹಳ ಪ್ರಭಾವಿತಗೊಂಡಿದ್ದೇನೆ. ಈಗ ನಾನು ಖಂಡಿತ ನಿಮ್ಮ ಜಮಾಅತಿನ ಬಗ್ಗೆ ಕಲಿಯುವೆನು ಮತ್ತು ಹೆಚ್ಚಿನ ಸತ್ಯಶೋಧನೆ ನಡೆಸುವೆನು.

ನಂತರ ಫ್ರೆಂಚ್ ಗಯಾನಾದ ಇನ್ನೋರ್ವ ಅಹದಮದೀಯೇತರರು ಇದ್ದರು. ಕಾರ್ಯಕ್ರಮವನ್ನು ಕೇಳಲು ಆಗಮಿಸಿದ್ದರು. ಅವರು ಹೇಳುತ್ತಾರೆ: ಜಲ್ಸಾ ಸಾಲಾನ ಯು.ಕೆಯ ಕಾರ್ಯಕ್ರಮವನ್ನು ನಾನು ಮೊದಲ ಬಾರಿಗೆ ಆಲಿಸುತ್ತಿದ್ದೇನೆ ಮತ್ತು ನಾನು ತುಂಬಾ ಪ್ರಭಾವಿತನಾಗಿದ್ದೇನೆ. ನಿಮ್ಮ ಜಲ್ಸವೂ ಸಾರ್ವತ್ರಿಕವಾಗಿದೆ. ಮುಂದೆ ಅವರು ಹೇಳುತ್ತಾರೆ; ನಾನು ಮೂಲತಃ ಗಿನಿ–ಕನಕ್ರಿಯವನಾಗಿದ್ದೇನೆ. ಜಲ್ಸಾದ ಕಾರ್ಯಕ್ರಮದ ಸಮಯದಲ್ಲಿ, ಲೈವ್ ಸ್ಟ್ರೀಮ್ ಮೂಲಕ ಅನೇಕ ದೇಶಗಳು ಜಲ್ಸಾದಲ್ಲಿ ಭಾಗವಹಿಸುತ್ತಿರುವುದನ್ನು ನಾನು ನೋಡುತ್ತಿದ್ದೆ ಆದರೆ ಗಿನಿ–ಕನಾಕ್ರಿಯನ್ನು ಗೋಚರಿಸಲಿಲ್ಲ. ಹೀಗೆ ಞಾನು ಯೋಚಿಸುತ್ತಿರುವಾಗಲೇ ಸ್ಕ್ರೀನ್ ಮೇಲೆ ಗಿನಿ–ಕನಾಕರಿಯ ಜಮಾಅತ್‌ನ ವೀಡಿಯೋ ಪ್ರಸಾರವಾಯಿತು. ನನಗೆ ಈ ದೃಶ್ಯವನ್ನು ಕಂಡು ಅಲ್ಲಿಯೂ ನಿಮ್ಮ ಜಮಾಅತ್ ಇರುವುದನ್ನು ಕಂಡು ಬಹಳ ಸಂತೋಷವಾಯಿತು. ನಿಮ್ಮ ಖಲೀಫರು ವ್ಯಾಖ್ಯಾನಿಸಿದ ಮಹಿಳೆಯರ ಹಕ್ಕುಗಳಿಂದಾಗಿ ನಾನು ಮುಸ್ಲಿಂ ಎಂದು ಹೆಮ್ಮೆಪಡುತ್ತೇನೆ ಎಂದು ಅವರು ಹೇಳುತ್ತಾರೆ.

ಲೈಬೇರಿಯಾದ ಮುಸ್ಲಿಮೇತರ ಅತಿಥಿ ಶ್ರೀ. ಬೋಬ್ ಎಂ. ಡೊಲೊ. ಅವರು ಎಲೆಕ್ಟ್ರಿಕಲ್ ವಿಭಾಗದಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಾರೆ. ಅವರು ವಿದ್ಯಾವಂತರಾಗಿದ್ದಾರೆ. ಅಹ್ಮದಿಯಾ ಖಲೀಫಾ ಅವರ ಭಾಷಣವನ್ನು ಕೇಳಿದ ನಂತರ ನಾನು ತುಂಬಾ ಪ್ರಭಾವಿತನಾಗಿದ್ದೆ ಎಂದು ಹೇಳುತ್ತಾರೆ. ಇದಕ್ಕೂ ಮುಂಚೆ ನಾನು ಇಸ್ಲಾಂ ಧರ್ಮದಲ್ಲಿ ಹೆಣ್ಣಿಗೆ ಯಾವುದೇ ಹಕ್ಕು ಇಲ್ಲ ಅಂತ ಅಂದುಕೊಂಡಿದ್ದೆ ಆದರೆ ಇವತ್ತು ಈ ಸಂಬೋಧನೆ ಕೇಳಿದ ನಂತರ ಇಸ್ಲಾಂ ಧರ್ಮದಲ್ಲಿ ಹೆಣ್ಣಿಗೆ ಇರುವ ಹಕ್ಕುಗಳನ್ನು ಬೇರೆ ಯಾವ ಧರ್ಮದಲ್ಲಿಯೂ ಕಾಣದಂತಹ ವಿಸ್ತೃತವಾಗಿ ವಿವರಿಸಲಾಗಿದೆ ಎಂದು ತಿಳಿಯಿತು. ಅದಕ್ಕೂ ಮೊದಲು ಅಹ್ಮದಿಯಾ ಜಮಾಅತ್ ದೊಡ್ಡ ಸಂಘಟಿತ ಜಮಾಅತ್ ಎಂದು ಕೇಳಿದ್ದೆ. ಇಂದು ಅಹ್ಮದಿಯಾ ಜಮಾಅತ್ ಒಬ್ಬ ನಾಯಕನ ಕೈಯಲ್ಲಿ ಹೇಗೆ ಒಗ್ಗೂಡಿದೆ ಮತ್ತು ಜಗತ್ತಿನಲ್ಲಿ ಶಾಂತಿಗಾಗಿ ಪ್ರಯತ್ನದಲ್ಲಿ ತೊಡಗಿದೆ ಎಂಬುದನ್ನು ನಾನು ನನ್ನ ಕಣ್ಣಾರೆ ನೋಡಿದ್ದೇನೆ.

ಝ್ಯಾಂಬಿಯಾದ ಒಬ್ಬ ಸಂಭಾವಿತ ವ್ಯಕ್ತಿ ಕಟೆಬುಲೆ. ಅವರು ವೃತ್ತಿಯಲ್ಲಿ ಪಾದ್ರಿಯಾಗಿದಾರೆ. ಜಲ್ಸ ಸಾಲಾನದ ಕೊನೆಯ ದಿನ, ನಿಮ್ಮ ಖಲೀಫಾ ಅವರ ಸಮಾರೋಪ ಭಾಷಣವನ್ನು ನಾನು ಕೇಳಿದೆ, ನಾನು ತುಂಬಾ ಪ್ರಭಾವಿತನಾಗಿದ್ದೆ ಎಂದು ಹೇಳುತ್ತಾರೆ. ನಿಮ್ಮ ಖಲೀಫರ ಸಂಬೋಧನೆಯು ತುಂಬಾ ಅದ್ಭುತವಾಗಿದೆ ಎಂದು ಅವರು ಹೇಳಿದರು.

ಮಹಿಳೆಯರ ಹಕ್ಕುಗಳನ್ನು ಇಸ್ಲಾಂ ಎಷ್ಟು ಸುಂದರವಾಗಿ ವಿವರಿಸಿದೆ ಎಂದು ನನಗೆ ಸಂಪೂರ್ಣವಾಗಿ ತಿಳಿದಿರಲಿಲ್ಲ. ಇಸ್ಲಾಂ ಮಹಿಳೆಯರ ಹಕ್ಕುಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ ಮತ್ತು ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವನ್ನು ನೀಡಿಲ್ಲ ಎಂದು ನಾನು ಭಾವಿಸುತ್ತಿದ್ದೆ.

ನನ್ನ ಪ್ರಕಾರ, ಇಸ್ಲಾಂ ಮಹಿಳೆಯನ್ನು ಮನೆಯೊಳಗೆ ಬೀಗ ಹಾಕಿದೆ ಆದರೆ ಇಂದು, ಈ ಸಂಬೋಧನೆಯನ್ನು ಆಲಿಸಿದ ನಂತರ, ನನ್ನ ದೃಷ್ಟಿಕೋನವು ಬದಲಾಗಿದೆ.

ಇಸ್ಲಾಂ ಮಹಿಳೆಯರಿಗೆ ನೀಡಿರುವ ಹಕ್ಕುಗಳನ್ನು ಕ್ರಿಶ್ಚಿಯನ್ ಧರ್ಮದಲ್ಲಿ ನೀಡಲಾಗಿಲ್ಲ ಎಂದು ಹೇಳಲು ನಾನು ನಾಚಿಕೆಪಡುವುದಿಲ್ಲ. ಇವರು ಕ್ರಿಶ್ಚಿಯನ್ ಪಾದ್ರಿಗಳು ಮತ್ತು ಇಸ್ಲಾಂ ನೀಡಿದ ಹಕ್ಕುಗಳನ್ನು ಕ್ರಿಶ್ಚಿಯನ್ ಧರ್ಮದಿಂದ ನೀಡಲಾಗಿಲ್ಲ ಎಂದು ಅವರು ಹೇಳುತ್ತಾರೆ. ನಾವು ನಮ್ಮ ಮಹಿಳೆಯರನ್ನು ಯಾವುದೇ ಕಾರಣವಿಲ್ಲದೆ ಬಲವಂತ ಮಾಡುತ್ತೇವೆ ಮತ್ತು ಮಹಿಳೆಯರನ್ನು ನಮ್ಮ ಗುಲಾಮರಂತೆ ಪರಿಗಣಿಸುತ್ತೇವೆ. ಬಲವಂತದಿಂದ ಮನುಷ್ಯ ಹೇಗಾದರೂ ತನ್ನ ಹಕ್ಕುಗಳನ್ನು ಪಡೆಯುತ್ತಾನೆ ಎಂದು ನಿಮ್ಮ ಖಲೀಫಾ ಸರಿಯಾಗಿ ಹೇಳಿದ್ದಾರೆ. ಇಸ್ಲಾಂ ಹಿಂಸಾತ್ಮಕ ಶಿಕ್ಷಣವನ್ನು ಸಹಿಸುವುದಿಲ್ಲ ಎಂದು ಇಂದು ನಾನು ಭಾವಿಸಿದೆ, ಆದರೆ ಇಸ್ಲಾಂನ ಶಿಕ್ಷಣವು ತುಂಬಾ ಸುಂದರವಾಗಿದೆ.

ಜಮಾಅತಿನ ಬಗ್ಗೆ ಕಲಿಯುತ್ತಿರುವ ಐವರಿಕೋಸ್ಟಿನ ಒಬ್ಬ ಸಹೋದರ ಹೀಗೆ ಹೇಳಿದರು. ಅವರು ಮೊದಲ ಬಾರಿ ಯಾವುದೇ ಜಲ್ಸವನ್ನು ಟಿ.ವಿ.ಯಲ್ಲಿ ನೇರವಾಗಿ ನೋಡಿದ್ದರು. ಜಲ್ಸದ ವ್ಯವಸ್ಥೆಯನ್ನು ನೋಡಿ ಬಹಳ ಪ್ರಭಾವಿತಗೊಂಡರು. ಇಷ್ಟು ಹೆಚ್ಚು ಜನರಿಗೆ ವ್ಯವಸ್ಥೆ ಮಾಡುವುದು ಮತ್ತು ಬಹಳ ಉತ್ತಮ ರೀತಿಯಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದು ಖಿಲಾಫತಿನ ತರಬೇತಿಯ ಆಳವಾದ ಪ್ರಭಾವ ಅಹ್ಮದಿಯರ ಮೇಲಿದೆ ಎಂಬುದನ್ನು ತಿಳಿಸುತ್ತದೆ. ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಜನರು ಹೇಗೆ ಬೈಅತ್ ಮಾಡುತ್ತಿದ್ದರು ಎಂಬುದು ಅವರಿಗೆ ಗೊತ್ತಿರಲಿಲ್ಲ. ಆದರೆ ಇಂದು ಖಿಲೀಫತುಲ್ ಮಸೀಹ್‌ರ ಕೈಯಲ್ಲಿ ಜನರು ಬೈಅತ್ ಮಾಡುವುದನ್ನು ನೋಡಿಕೊಂಡು ಉಂಟಾದ ಆಳವಾದ ಪ್ರಭಾವ ಮತ್ತು ಅವಸ್ಥೆ ವರ್ಣಿಸಲು ಸಾಧ್ಯವಲ್ಲ ಎಂದು ಅವರು ಹೇಳಿದರು. ಈಗ ನಾನು ನಿಮ್ಮ ಖಲೀಫನ ಧರ್ಮೋಪದೇಶವನ್ನು ನಿಯಮಿತವಾಗಿ ಪಠಿಸುತ್ತೇನೆ ಎಂದು ಹೇಳಿದರು.

ಕಾಂಗೋ-ಕಿನ್ಶಾಸಾ, ವಲಸೆ ಇಲಾಖೆಯ ಪ್ರತಿನಿಧಿಗಳು ಇಲ್ಲಿಗೆ ಬಂದರು. ಜಲ್ಸದಲ್ಲಿ ಭಾಗಿಯಾಗಿದ್ದರು, ಅಲ್ಲಿ ಅವರು ನನ್ನ ಭಾಷಣವನ್ನು ಆಲಿಸಿದರು. ನನ್ನ ಭಾಷಣವನ್ನು ಆಲಿಸಿದ ನಂತರ ಹೇಳಿದರು: ಈ ಭಾಷಣವನ್ನು ಆಲಿಸಿದ ನಂತರ ಇಲ್ಲಿಯ ತನಕ ಅವರು ಅಹ್ಮದಿ ಏಕೆ ಆಗಲಿಲ್ಲ? ಎಂದು ಯೋಚಿಸಿದೆ. ಮತ್ತು ಮುಂದೆ ಮಿಷನ್ ಹೌಸ್‌ಗೆ ಬರುತ್ತೇನೆ ಎಂದು ಭರವಸೆ ಕೊಟ್ಟು ಹೊರಟು ಹೋದರು. ಮತ್ತು ಜಮಾಅತ್‌ನ ಬಗ್ಗೆ ಇನ್ನಷ್ಟು ಸಂಶೋಧನೆ ಮಾಡುತ್ತೇನೆ.

ಎಂ.ಟಿ.ಎ.ವಿನ ಮೂಲಕ ಜನರು ತರಬೇತಿ ಪಡೆಯುತ್ತಾರೆ.

ಮರೌವಾ ಜಮಾಅತ್‌ನ ಮಿಷನ್ ಹೌಸ್‌ನಲ್ಲಿ ಜಲ್ಸಾ ಯುಕೆ ವೀಕ್ಷಿಸುವ ವ್ಯವಸ್ಥೆಯೂ ಇತ್ತು. ಕ್ಯಾಮರೂನ್‌ನಲ್ಲಿರುವ ಒಂದು ಗುಂಪು ಮರೌವಾನಿಂದ ಬಂದಿತ್ತು. ಇಲ್ಲಿ ಜಲ್ಸಾ ವೀಕ್ಷಿಸುತ್ತಿದ್ದ ಜನರಲ್ಲಿ ಸಮೀಪದ ಗ್ರಾಮದ ಓರ್ವ ಮಹಿಳೆ ಉಮ್ಮುಲ್ ಎಂಬವರು ಇದ್ದರು. ಜಲ್ಸದ ಮೂರು ದಿನಗಳಿಂದ ಪ್ರಯೋಜನ ಪಡೆದರು. ಜಲ್ಸ ಕೊನೆಗೊಂಡಾಗ ಜನರನ್ನು ಉಪದೇಶಿಸುತ್ತಾ ಹೀಗೆ ಹೇಳಿದರು: ನಮ್ಮ ಬಳಿ ಎಂ.ಟಿ.ಎ. ಇದೆ ಎಂಬುದು ನಮ್ಮ ಸೌಭಾಗ್ಯವಾಗಿದೆ. ಇದೊಂದು ಟಿ.ವಿ. ಚಾನೆಲ್ ಅಲ್ಲ. ಇದು ಜನರು ದಿನಾಲು ವಿದ್ಯೆ ಕಲಿಯುವ ಒಂದು ಶಾಲೆ ಮತ್ತು ಯೂನಿವರ್ಸಿಟಿಯಾಗಿದೆ. ನಾವು ಕೂಡ ಈ ಮೂರು ದಿನಗಳಲ್ಲಿ ಬಹಳ ಅರಿವು ಗಳಿಸಿದೆವು... ಪ್ರತಿಯೊಬ್ಬರು ಇದರಿಂದ ಪ್ರಯೋಜನ ಪಡೆಯಬೇಕು. ಇಸ್ಲಾಮಿನ ಬಗ್ಗೆ ಎಲ್ಲರ ಅರಿವು ವರ್ಧಿಸಲು ಇದನ್ನು ನಯತವಾಗಿ ಮನೆಗಳಲ್ಲಿ ನೋಡಬೇಕು ಮತ್ತು ಮಕ್ಕಳಿಗೂ ತೋರಿಸಬೇಕು. ನಮ್ಮ ವಿಶ್ವಾಸ ವರ್ಧಿಸಲು ವಿಶೇಷವಾಗಿ ಖಿಲೀಫತುಲ್ ಮಸೀಹ್‌ರ ಖುತ್ಬಗಳನ್ನು ಮತ್ತು ಭಾಷಣಗಳನ್ನು ಆಲಿಸಬೇಕು.

ಕಾಂಗೋಕಿನ್ಶಾಸಾದಿಂದಲೇ ಮತ್ತೊಂದು ಪ್ರತಿಕ್ರಿಯೆಯಿದೆ. ಅಲೀಬೋ ಜಮಾಅತಿನಲ್ಲಿ ಜಲ್ಸದ ಕಾರ್ಯಕ್ರಮವನ್ನು ತೋರಿಸಲಿಕ್ಕಾಗಿ ಹಂಬಲಿ ಮುಸ್ಲಿಮರ ಇಮಾಮನ್ನು ಆಮಂತ್ರಿಸಲಾಗಿತ್ತು. ಜಲ್ಸ ಕೊನೆಗೊಂಡಾಗ ಅವರು ಹೀಗೆ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ನಮಗೆ ನೀಡಿದ ನೈಜ ಇಸ್ಲಾಮಿನ ಪಾಠವನ್ನು ಅಹ್ಮದಿಯಾ ಜಮಾಅತ್ ಮುಂದಿರಿಸಿದ ರೀತಿಯು ನನ್ನ ಪ್ರಕಾರ ಅಹ್ಮದಿಯಾ ಜಮಾಅತಿನದ್ದೇ ವೈಶಿಷ್ಟ್ಯವಾಗಿದೆ. ಏನಾದರೂ ಮಾಡಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಲು ನಾನು ಕೂಡ ಬಯಸುತ್ತೇನೆ. ಅಲ್ಲಾಹನು ನನಗೆ ಅದರ ಸೌಭಾಗ್ಯ ನೀಡಲಿ. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ.

ಅಹ್ಮದಿಯ್ಯತ್ತಿನ ಬಗ್ಗೆ ಕಲಿಯುತ್ತಿರುವ ಅಲ್‌ಬಾನಿಯದ ಒಬ್ಬ ಮುಸ್ಲಿಂ ಹುಡುಗಿ ವಿಲ್ಮಾ ಎಂಬವಳು ಹೀಗೆ ಹೇಳಿದಳು: ಜಲ್ಸ ಸಾಲಾನ ಯು.ಕೆ.ಯು ಒಂದು ವೈಭವಶಾಲಿ ಜಲ್ಸ ಆಗಿದೆ. ಅದರಲ್ಲಿ ಅಸಾಧಾರಣ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ನಾನು ಇಲ್ಲಿಯ ವರೆಗೂ ಜಮಾಅತಿನಲ್ಲಿ ಸೇರ್ಪಡೆಯಾಗಿಲ್ಲ. ಆದರೆ ಇದರ ಪ್ರಾಮುಖ್ಯ ಮತ್ತು ಸತ್ಯದ ಬಗ್ಗೆ ಗಂಭೀರವಾಗಿ ಆಲೋಚಿಸಲು ಈ ಜಲ್ಸ ನನಗೆ ಪ್ರೇರಣೆ ನೀಡಿದೆ.

ಫ್ರಂಚ್ ಗಿಯಾನದಲ್ಲಿ ಅಫ್ಘಾನಿಸ್ತಾನದ ಮಹಿಳೆಯೊಬ್ಬಳು ತನ್ನ ಮಕ್ಕಳ ಜೊತೆಗೆ ಜಲ್ಸಗೆ ಬಂದಿದ್ದರು. ಅವರು ಹೇಳುತ್ತಾರೆ: ನಿಮ್ಮ ಜಮಾಅತಿನ ಬಗ್ಗೆ ಮೊದಲು ಸ್ವಲ್ಪ ಗೊತ್ತಿತ್ತು. ಆದರೆ ಜಲ್ಸ ಸಾಲಾನ ಯುಕೆಯಲ್ಲಿ ನಿಮ್ಮ ಖಲೀಫರ ಭಾಷಣವನ್ನು ಆಲಿಸಿ ವಿಸ್ಮಯಕರವಾದ ಅವಸ್ಥೆಯಾಗಿತ್ತು. ನಮ್ಮ ಧರ್ಮ ಮಹಿಳೆಯರ ಹಕ್ಕುಗಳ ಬಗ್ಗೆ ಎಷ್ಟು ಕಾಳಜಿ ವಹಿಸುತ್ತದೆ ಎಂದು ಇಸ್ಲಾಮಿನಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಕೇಳಿ ನನಗೆ ನೆಮ್ಮದಿಯಾಯಿತು. ನನಗೆ ಇದು ಇಷ್ಟು ಹೆಚ್ಚು ಅನುಭವವಾಗಲು ಕಾರಣವೇನೆಂದರೆ, ಅಫ್ಘಾನಿಸ್ತಾನದಲ್ಲಿ ತಾಲಿಬಾನ್‌ಗಳಿಂದ ಸ್ಥಾಪಿಸಲಾಗಿರುವ ಇಸ್ಲಾಮಿನಲ್ಲಿ ಮಹಿಳೆಯರಿಗೆ ಯಾವುದೇ ಸ್ಥಾನವಿಲ್ಲ. ಆದರೆ ಸತ್ಯದಲ್ಲಿ ಇಸ್ಲಾಮಂತು ಮಹಿಳೆಯರ ಹಕ್ಕುಗಳನ್ನು ಸಂಪೂರ್ಣವಾಗಿ ಖಾತರಿಪಡಿಸುತ್ತದೆ.

ಲೈಬೇರಿಯಾದಲ್ಲಿ ಮುಸ್ಲಿಮೇತರ ಅತಿಥಿ ಶ್ರೀ ಅಮೋಸ್ ವೊನ್ಸೆಹ್ ಸಾಹಿಬ್. ಪೊಲೀಸ್ ವಿಭಾಗದಲ್ಲಿ ಸಿಐಡಿ ಕಮಾಂಡರ್ ಆಗಿದ್ದಾರೆ. ಆತ ವಿದ್ಯಾವಂತರಾಗಿದ್ದಾರೆ. ಆಹ್ವಾನದ ಮೇರೆಗೆ ಜಲ್ಸದಲ್ಲಿ ಭಾಗಿಯಾಗಿದ್ದರು. ಎರಡನೇ ದಿನದ ನನ್ನ ಸಂಬೋಧನೆಯನ್ನು ಕೇಳಿದಾಗ ಅವರು ಬಹಳ ಪ್ರಭಾವಿತರಾದರು ಎಂದು ಅವರು ಹೇಳಿದರು. ಮರುದಿನ ಅವರಿಗೆ ಅಹ್ವಾನಿಸಲಾಗಿತ್ತು. ಮೂರನೇ ದಿನ ಅವರೇ ಸ್ವತಃ ಮತ್ತೆ ಬಂದು ಭಾಷಣದ ನಂತರ ಇಸ್ಲಾಂ ಬಗ್ಗೆ ನನ್ನ ಅಭಿಪ್ರಾಯಗಳು ತುಂಬಾ ನಕಾರಾತ್ಮಕವಾಗಿದ್ದವು ಮತ್ತು ಇದಕ್ಕೆ ಕೆಲವು ಮುಸ್ಲಿಮರ ವರ್ತನೆಯೂ ಕಾರಣವಾಗಿತ್ತು ಎಂದು ಹೇಳಿದರು ಆದರೆ ಜಲ್ಸದ ಕಾರ್ಯಕ್ರಮವನ್ನು ನೋಡಿದ ನಂತರ ನಾನು ಇಸ್ಲಾಂ ಧರ್ಮವು ಶಾಂತಿಯುತ ಧರ್ಮವಾಗಿದೆ ಮತ್ತು ಅಹ್ಮದೀಯ ಜಮಾಅತ್ ಎಲ್ಲಾ ರೀತಿಯಲ್ಲಿ ಮಾನವೀಯತೆಯ ಸೇವೆಯಲ್ಲಿ ತೊಡಗಿಸಿಕೊಂಡಿದೆ ಎಂದು ಅರಿತುಕೊಂಡೆ.. ಆದ್ದರಿಂದ, ಇಂದಿನಿಂದ ಇಸ್ಲಾಂ ಬಗ್ಗೆ ನನ್ನ ಆಲೋಚನೆಗಳು ಬದಲಾಗಿವೆ ಮತ್ತು ನಾನು ಹೊಂದಿದ್ದ ಆತಂಕಗಳು ಇಲ್ಲವಾಗಿವೆ.

ಅಹ್ಮದಿಯಾ ಜಮಾಅತ್ ಈ ಪ್ರದೇಶವನ್ನು ಮೊದಲೇ ತಲುಪಿದ್ದರೆ, ಜಮಾಅತ್‌ನಿಂದ ಸಾಕಷ್ಟು ಜನರು ಇಸ್ಲಾಂಗೆ ಮತಾಂತರಗೊಳ್ಳುತ್ತಿದ್ದರು ಎಂದು ಅವರು ಹೇಳಿದರು.

ಫ್ರೆಂಚ್ ಗಯಾನಾದಲ್ಲಿ, ಜಮಾಅತ್ತಿನೊಂದಿಗೆ ಒಟ್ಟಿಗೆ ಸೇರಿ ಜಲ್ಸಾವನ್ನು ಕೇಳುವ ವ್ಯವಸ್ಥೆಯೂ ಮಾಡಲಾಗಿತ್ತು. ಅದೊಂದು ಚಿಕ್ಕ ಜಮಾಅತ್ತಾಗಿದೆ ಮತ್ತು ಅಲ್ಲಿಗೆ ಬಹಳ ಕಡಿಮೆ ಪ್ರಮಾಣದಲ್ಲಿ ಜನರು ಬಂದಿದ್ದರು. ಅಲ್ಲಿ, ಹೈಟಿಯಿಂದ ಜಮಾಅತ್ತಿನ ಬಗ್ಗೆ ಕಲಿಯುತ್ತಿರುವ ಇಬ್ಬರು ಕ್ರೈಸ್ತರು ಸಮಾರೋಪ ಭಾಷಣವನ್ನು ಕೇಳಲು ಬಂದರು. ಇಬ್ಬರೂ ಸ್ನೇಹಿತರಾಗಿದ್ದರು. ಅವರು ಹೇಳಿದರು, "ನಿಮ್ಮ ಖಲೀಫರು ತಮ್ಮ ಭಾಷಣದಲ್ಲಿ ಬಳಸಿರುವ ವಿಷಯ, ಅಂದರೆ ಮಹಿಳಾ ಹಕ್ಕುಗಳು, ಕಳೆದ ಎರಡು ದಿನಗಳಿಂದ ನಾವು ಮಾತನಾಡುತ್ತಿದ್ದ ವಿಷಯವೇ ಆಗಿದೆ ಎಂದು ನಮಗೆ ಆಶ್ಚರ್ಯವಾಗಿದೆ. ಮಹಿಳಾ ಹಕ್ಕುಗಳ ಬಗ್ಗೆ ಇಸ್ಲಾಂ ಧರ್ಮದ ಬೋಧನೆ ಏನು?" ಇಸ್ಲಾಂ ಧರ್ಮವು ಮಹಿಳೆಯರ ಹಕ್ಕುಗಳ ಬಗ್ಗೆ ಸಂಪೂರ್ಣ ಮತ್ತು ಸಮಗ್ರ ಶಿಕ್ಷಣವನ್ನು ನೀಡುತ್ತದೆ ಎಂದು ನಮಗೆ ತಿಳಿದಿರಲಿಲ್ಲ.

ನಾವು ಇಂದು ನಿಮ್ಮ ಖಲೀಫಾ ಅವರ ಭಾಷಣವನ್ನು ಕೇಳದಿದ್ದರೆ, ಈ ಸುಂದರವಾದ ಮತ್ತು ಪರಿಪೂರ್ಣವಾದ ಬೋಧನೆಯು ನಮಗೆ ತಿಳಿಯುತ್ತಿರಲಿಲ್ಲ. ಪ್ರಸ್ತುತ ಕಾಲದಲ್ಲಿ, ಮಹಿಳೆಯರ ಹಕ್ಕುಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ, ಆದರೆ ಇಸ್ಲಾಂ ಮಾತ್ರ ಪುರುಷ ಮತ್ತು ಮಹಿಳೆ ಇಬ್ಬರ ಜವಾಬ್ದಾರಿಗಳನ್ನು ಅವರ ನಿಜವಾದ ಬಣ್ಣದಲ್ಲಿ ಪ್ರಸ್ತುತಪಡಿಸುತ್ತದೆ. ಈಗ ಅವರು ಲೈಫ್ ಆಫ್ ಮುಹಮ್ಮದ್ ಅನ್ನು ಸಹ ಓದುತ್ತಿದ್ದಾರೆ ಮತ್ತು ನಂತರ ಅವರು ಹೆಚ್ಚಿನ ಲಿಟರೇಚರ್ ಅನ್ನು ಕೇಳಿ ಪಡೆದುಕೊಂಡಿದ್ದಾರೆ.

ಮಾರಿಷಸ್‌ನಿಂದ ವರದಿಯಾಗಿದೆ. ಅಲ್ಲಿ ನಡೆಯುತ್ತಿದ್ದ ಪ್ರಸಾರವನ್ನು ವೀಕ್ಷಿಸಲು ಜನ ಜಮಾಯಿಸಿದ್ದರು. ಅಲ್ಲಿನ ಸಂಸದೆ ತಾನಿಯಾ ಡಿಯೋಲೆ ಸಾಹಿಬ ಅವರು ಸಹ ಅಲ್ಲಿ ಬಂದರು. ಅವರು ಸಂಸದೀಯ ಖಾಸಗಿ ಕಾರ್ಯದರ್ಶಿಯೂ ಹೌದು. ಅದ್ಭುತ ನೋಟವಿದೆ ಎಂದು ಅವರು ಹೇಳುತ್ತಾರೆ. ಅಹ್ಮದಿಯಾ ಜಮಾಅತ್‌ನ ಕಾರ್ಯಕ್ರಮಗಳು ಮತ್ತು ಅಹ್ಮದಿಯಾ ಜಮಾತ್‌ನ ಸಂಸ್ಕೃತಿಯನ್ನು ವೀಕ್ಷಿಸುವುದು ಉತ್ತಮ ಅನುಭವವಾಗಿದೆ. ನೀವು ಲಂಡನ್‌ನಂತಹ ನಗರದಲ್ಲಿ ಇಂತಹ ದೊಡ್ಡ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ತುಂಬಾ ಪ್ರಭಾವಶಾಲಿಯಾಗಿದೆ. ಇಂದಿನ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯ

ದೃಷ್ಟಿಯಿಂದ ಧರ್ಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದಿರುವುದಂತೂ ಸತ್ಯ ಎಂದು ಅವರು ಹೇಳುತ್ತಾರೆ. ತಮ್ಮನ್ನು ಪರಿಶೀಲಿಸಿಕೊಳ್ಳುವುದಕ್ಕಾಗಿ ಮತ್ತು ಆಧ್ಯಾತ್ಮಿಕ ಉದ್ದೇಶಕ್ಕಾಗಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ಒಟ್ಟಾಗಿ ಸೇರುವುದು ದೊಡ್ಡ ವಿಷಯವಾಗಿದೆ. ವಿಶೇಷವಾಗಿ ನಾವೆಲ್ಲರೂ ಕಠಿಣ ಅವಧಿಯನ್ನು ಎದುರಿಸುತ್ತಿರುವಾಗ ಮತ್ತು ಇದರಲ್ಲಿ ಜಗತ್ತು ಅನೇಕ ಬಿಕ್ಕಟ್ಟುಗಳಿಂದ ಬಳಲುತ್ತಿದೆ.

ನನಗೆ, ಸಮಾಜವನ್ನು ಸರಿಯಾದ ಹಾದಿಯಲ್ಲಿ ಇರಿಸಲು ಮತ್ತು ಉನ್ನತ ಮೌಲ್ಯಗಳನ್ನು ಕಾಪಾಡಿಕೊಳ್ಳಲು ಈ ರೀತಿಯ ವಿಷಯಗಳು ತುಂಬಾ ಸಹಾಯಕವಾಗಿವೆ. ನನಗೆ ಈ ಅನುಭವ ತುಂಬಾ ಸಂತೋಷಕರವಾಗಿದೆ. ನಾನು ಇಲ್ಲಿ ಅನೇಕ ವಿಷಯಗಳನ್ನು ಕಲಿತಿದ್ದೇನೆ. ಇದರೊಂದಿಗೆ ಈ ಕ್ಷಣಗಳು ನನಗೆ ಆಲೋಚನೆ ಮಾಡುವಂತಿದೆ.

ನವ ಅಹ್ಮದಿಯರು ಕೂಡ ತಮ್ಮ ಅನಿಸಿಕೆಗಳನ್ನು ಕಳುಹಿಸಿರುವರು. ಬುರ್ಕಿನಾಫಾಸೊದ ಒಬ್ಬ ನವ ಅಹ್ಮದಿ ಮಹಿಳೆ ಹವ್ವ ಸಾಹಿಬ ಹೇಳುತ್ತಾರೆ: ಖ಼ಲೀಫರ ತೆರೆದ ಮತ್ತು ಸ್ವಚ್ಛ ಮಾತುಗಳು ನಮ್ಮೊಡನೆ ಹೇಳುವುದೇನೆಂದರೆ, ನಾವು ಅಹ್ಮದಿಯ್ಯತ್ತನ್ನು ನೈಜ ಇಸ್ಲಾಮೆಂದು ಅರಿತುಕೊಂಡು ಇತರರನ್ನು ಅಹ್ಮದಿಯರನ್ನಾಗಿ ಮಾಡುವುದು ಮಾತ್ರ ಸಾಕಾಗದು. ಬದಲಾಗಿ ಸಮಾಜದಲ್ಲಿ ಸ್ವತಃ ಕೂಡ ಒಬ್ಬ ಮಾದರಿ ಅಹ್ಮದಿಯಾಗಿ ಇರಬೇಕು. ತಮ್ಮ ಮಾತು ಮತ್ತು ಕೃತ್ಯವನ್ನು ಒಂದಾಗಿಸಿ ತಮ್ಮ ವಿಶ್ವಾಸವನ್ನು ಸುದೃಢಗೊಳಿಸಬೇಕು.

ಆಫ್ರಿಕದ ಜನರು ಅವಿದ್ಯಾವಂತರು ಎಂದು ಜನರು ಹೇಳುತ್ತಾರೆ. ಆದರೆ ಈ ಮಹಿಳೆಯನ್ನು ನೋಡಿರಿ. ನಮ್ಮ ಮಾತು ಮತ್ತು ಕೃತ್ಯವನ್ನು ಒಂದೇ ತರವಾಗಿ ಮಾಡಬೇಕು ಎಂದು ಹೇಳುತ್ತಾರೆ. ಇದು ಪ್ರತಿ ವಿದ್ಯಾವಂತ ಅಹ್ಮದಿಯರು, ಯೂರೋಪಿನಲ್ಲಿ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇರುವ ಅಹ್ಮದಿಯರು ಯೋಚಿಸಬೇಕಾದ ಸಂಗತಿಯಾಗಿದೆ. ನಮ್ಮ ಮಾತು ಮತ್ತು ಕೃತ್ಯ ಒಂದೇ ತರ ಇದೆಯೋ ಎಂದು ನೋಡಬೇಕಾಗಿದೆ.

ಜಲ್ಸ ಸಾಲಾನ ಯುಕೆಯಲ್ಲಿ ಅಸಾಮಾನ್ಯವಾದುದು ಎಂದು ಇಂಡೋನೇಷ್ಯಾದ ಹೊಸ ಅಹ್ಮದಿ ಮಹಿಳೆ ಹೇಳುತ್ತಾರೆ. ನಾನು ಓರ್ವ ಹೊಸ ಅಹ್ಮದಿಯಾಗಿದ್ದೇನೆ ಎಂದು ಹೇಳುತ್ತಾರೆ. ಈ ದೈವಿಕ ಸಮುದಾಯದಲ್ಲಿ ನನ್ನ ಆಧ್ಯಾತ್ಮಿಕತೆಯನ್ನು ಹೆಚ್ಚಿಸುವ ಕ್ಷಣ ಇದಾಗಿದೆ. ಈ ಶುಭ ಜಲ್ಸದಲ್ಲಿ ಭಾಗವಹಿಸಲು ಜನರು ತಂಡೋಪತಂಡವಾಗಿ ಬಂದಿದ್ದನ್ನು ನಾನು ನೋಡಿದೆ. ನಾನು ಈ ಜಲ್ಸಾವನ್ನು ಟಿವಿಯಲ್ಲಿ ಮಾತ್ರ ನೋಡಿದ್ದರೂ, ನನ್ನ ಹೃದಯ ಮತ್ತು ಮನಸ್ಸು ಜಲ್ಸಾ ಯುಕೆಯಲ್ಲಿತ್ತು. ಈ ಸಭೆಯು ಈ ದೈವಿಕ ಸಮೂದಾಯದಲ್ಲಿ ನನ್ನ ನಂಬಿಕೆಯನ್ನು ಹೆಚ್ಚಿಸಿದೆ ಮತ್ತು ನಾನು ಭವಿಷ್ಯದಲ್ಲಿ ಉತ್ತಮವಾಗುತ್ತೇನೆ.

ಮಹಿಳೆಯರ ಸಭಾಂಗಣದಿಂದ ಮಹಿಳೆಯರಿಗೆ ನನ್ನ ಭಾಷಣವನ್ನು ಕೇಳಿದ ನಂತರ, ಸ್ಥಳೀಯ ಲಜ್ನ ಓರ್ವರು ಇಸ್ಲಾಂ ಅಹ್ಮದಿಯತ್ತನ್ನು ಹರಡಲು ಎಲ್ಲಾ ರೀತಿಯ ತ್ಯಾಗಗಳಿಗೆ ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ಸಿದ್ಧಗೊಳಿಸುತ್ತೇವೆ ಎಂದು ಕಾಂಗೋ–ಬ್ರಾಝ಼ಾವಿಲ್ಲೆಯಿಂದ ವರದಿಯಾಗಿದೆ.

ನಂತರ ಆಧ್ಯಾತ್ಮಿಕ ಪರಿಸರದಲ್ಲಿ ಮೂರು ದಿನಗಳು ಕಳೆದಿವೆ ಎಂದು ನವ ಅಹ್ಮದಿಯರು ಹೇಳುತ್ತಾರೆ. ಪ್ರತಿದಿನವೂ ಹೀಗೆಯೇ ಕಳೆಯಬೇಕೆಂದು ನಾವು ಬಯಸುತ್ತೇವೆ ಮತ್ತು ನಾವು ಆಧ್ಯಾತ್ಮಿಕ ವಾತಾವರಣವನ್ನು ಆನಂದಿಸುತ್ತೇವೆ.

ಇಂಡೋನೇಷ್ಯಾದಿಂದ ಎರ್ರಿ ಹಿಮವಾನ್ ಅವರು ನವ ಅಹ್ಮದಿಯಾಗಿದ್ದಾರೆ ಅವರು ಹೇಳುತ್ತಾರೆ: ನಾನು ಓರ್ವ ಹೊಸ ಅಹ್ಮದಿಯಾಗಿದ್ದೇನೆ. ಎಂ.ಟಿ.ಎ.ಯ ಲೈವ್ ಸ್ಟ್ರೀಮ್ ಮೂಲಕ ಜಲ್ಸಾ ವಾರ್ಷಿಕ ಯುಕೆ ವೀಕ್ಷಿಸಿದ ನಂತರ ನನ್ನ ಬಳಿ ಒಂದೇ ಒಂದು ಪದವಿದೆ: ಅದು ವಿಸ್ಮಯ. ಇಡೀ ಪಂಚದಲ್ಲಿ ಒಂದೇ ಒಂದು ಇಸ್ಲಾಮಿಕ್ ಸಂಘಟನೆ ಇದೆ, ಅದರ ಸದಸ್ಯರು ಪ್ರಪಂಚದಾದ್ಯಂತ ಹರಡಿದ್ದಾರೆ ಎಂದು ನನಗೆ ಆಶ್ಚರ್ಯವಾಗಿದೆ. ದಿನದ 24 ಗಂಟೆಯೂ ನಡೆಯುವ ಒಂದು ಟಿವಿ ಸ್ಟೇಷನ್ ಇದೆ. Jehovah's witness ಮತ್ತು mormons ಮತ್ತು Adventist-SDA ನಂತಹ ಯಾವುದಾದರು ಇಸ್ಲಾಮಿಕ್ ಸಂಸ್ಥೆ ಇದೆಯೇ ಎಂದು ನಾನು ನನ್ನನ್ನು ಕೇಳಿಕೊಳ್ಳುತ್ತಿದ್ದೆ. ಇವೆಲ್ಲವೂ ಲಕ್ಷಾಂತರ ಅನುಯಾಯಿಗಳನ್ನು ಹೊಂದಿರುವ ಕ್ರಿಶ್ಚಿಯನ್ ಸಂಸ್ಥೆಗಳಾಗಿವೆ ಮತ್ತು ನೂರಾರು ದೇಶಗಳಲ್ಲಿ ಕೆಲಸ ಮಾಡುತ್ತಿವೆ ಆದರೆ ಒಂದು ಇಸ್ಲಾಮಿಕ್ ಸಂಘಟನೆಯು ಪ್ರಪಂಚದಾದ್ಯಂತ ಹರಡಿರುವ ಅಹ್ಮದಿಯಾ ಜಮಾಅತ್ ಎಂಬ ಉತ್ತರವನ್ನು ಪಡೆದುಕೊಂಡಿದ್ದೇನೆ ಮತ್ತು ನಾನು ಈ ಸಂಸ್ಥೆಯ ಸದಸ್ಯನಾಗಿರಲು ಸಂತೋಷಪಡುತ್ತೇನೆ. ಈ ಇಸ್ಲಾಮಿಕ್ ಸಂಘಟನೆಯು ನನ್ನ ಪಾತ್ರ ಮತ್ತು ವ್ಯಕ್ತಿತ್ವಕ್ಕೆ ಸರಿಹೊಂದುತ್ತದೆ. ಈಗ ಅಹ್ಮದಿಯಾಗಿರುವ ನಾನು ಉಪಯುಕ್ತ ವ್ಯಕ್ತಿಯಾಗಬಲ್ಲೆ ಮತ್ತು ಭೌತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ಪಡೆಯಬಹುದು.

ಕಝ಼ಾಕಿಸ್ತಾನದ ಬುಗುಬಯೋಸ್ ದೌರೆನ್ ಸಾಹಿಬ್ ಅವರು ಹೇಳುತ್ತಾರೆ: ಜಲ್ಸವು ನನ್ನ ಮನಸ್ಸಿನ ಮೇಲೆ ವಿಶೇಷ ಪ್ರಭಾವ ಬೀರಿದೆ. ನಾನು ನನ್ನ ಹೆಂಡತಿಯೊಂದಿಗೆ ಜಲ್ಸ ಸಾಲಾನದ ಕಾರ್ಯಕ್ರಮಗಳನ್ನು ಆಧ್ಯಾತ್ಮಿಕ ವಾತಾವರಣದಲ್ಲಿ ವೀಕ್ಷಿಸಿದೆ. ಕಾಲಘಟ್ಟದ ಖಲೀಫರ ಸಂಬೋಧನೆಯು ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನು ಬೀರಿತು, ಅದನ್ನು ಪದಗಳಲ್ಲಿ ವ್ಯಕ್ತಪಡಿಸಲಾಗುವುದಿಲ್ಲ. ಅದೇ ರೀತಿ ಇತರ ಭಾಷಿಕರ ಭಾಷಣವೂ ಉತ್ತಮವಾಗಿತ್ತು. ಪ್ರಪಂಚದಾದ್ಯಂತದ ಅಹ್ಮದೀಯರು ಎಂ.ಟಿ.ಎ ಮೂಲಕ ಜಲ್ಸಾದ ಕಾರ್ಯಕ್ರಮಗಳನ್ನು ವೀಕ್ಷಿಸುವ ಅವಕಾಶವನ್ನು ಪಡೆದರು. ಅಲ್ಲಾಹನು ಎಲ್ಲಾ ಕಾರ್ಯಕರ್ತರು ಮತ್ತು ವ್ಯವಸ್ಥಾಪಕ ಮಂಡಳಿಗೆ ಪ್ರತಿಫಲ ನೀಡಲಿ ಮತ್ತು ನನಗೂ ಪ್ರಾರ್ಥಿಸಲಿ, ಅಲ್ಲಾಹನು ಈ ಆಧ್ಯಾತ್ಮಿಕ ಭಾವನೆ ಮತ್ತು ಸ್ಥಿತಿಯನ್ನು ಮುಂದಿನ ವರ್ಷದ ಜಲ್ಸದವರೆಗೂ ಇಟ್ಟುಕೊಳ್ಳಲಿ ಮತ್ತು ಅದನ್ನು ಶಾಶ್ವತವಾಗಿ ಇಡಲಿ.

ಝ್ಯಾಂಬಿಯಾದ ನವ ಅಹ್ಮದಿಯೊಬ್ಬರು ನನ್ನ ಸಂಬೋಧನೆಯನ್ನು ಕೇಳಿದಾಗ ತನ್ನ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಕಣ್ಣುಗಳಿಂದ ಕಣ್ಣೀರು ಹರಿಯಿತು. ಪಕ್ಕದಲ್ಲಿ ಕುಳಿತಿದ್ದ ಗೆಳೆಯರೊಬ್ಬರು ಕೇಳಬೇಕೆಂದುಕೊಂಡಾಗ ಉತ್ತರಿಸಲಾಗದೆ ಕೆಲವು ನಿಮಿಷಗಳ ಕಾಲ ಸಭಾಂಗಣದಿಂದ ಹೊರಗೆ ಹೋದರು. ಕಣ್ಣೀರು ಒರೆಸಿಕೊಂಡು ಹಿಂತಿರುಗಿ ಬಂದು ಕೇಳಿದಾಗ ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಕಾಲದ ಖಲೀಫನನ್ನು ನೋಡುತ್ತಿದ್ದೇನೆ ಮತ್ತು ಅವರ ಧ್ವನಿಯನ್ನು ಕೇಳುತ್ತಿದ್ದೇನೆ ಎಂದು ಹೇಳಿದರು, ಆದ್ದರಿಂದ ಅವರ ಕಣ್ಣುಗಳಿಂದ ನೀರು ಹರಿಯಿತು.

ಅವರು ಮುಂದೆ ಹೇಳುತ್ತಾರೆ ನನಗೆ ಎಂಭತ್ತು ವರ್ಷ ಆಗಿದೆ. ನಾನು ನನ್ನ ಇಡೀ ಜೀವನವನ್ನು ತೋಳಗಳ ನಡುವೆ ಕಳೆದಿದ್ದೇನೆ ಅಂದರೆ ಕ್ರೂರ ಜನರ ನಡುವೆ ಕಳೆದಿದ್ದೇನೆ ಮತ್ತು ಅಹ್ಮದಿಯತ್ತಿಗೆ ಪ್ರವೇಶಿಸಿದಾಗ ಇಸ್ಲಾಮಿನ ನಿಜವಾದ ಬೋಧನೆಯು ಪ್ರೀತಿಯನ್ನು ಹರಡುವುದು ಮತ್ತು ಜನರ ನಡುವೆ ದ್ವೇಷವನ್ನು ಹರಡುವುದು ಅಲ್ಲ ಎಂದು ನಾನು ಕಂಡುಕೊಂಡೆ. ನಂತರ ಒಂದು ದಿನ ಫಜ್ರ್ ನಮಾಝ಼್ ಹಾಗೂ ದರ್ಸ್‌ನ ನಂತರ ಎದ್ದು ನಿಂತು ತನ್ನ ಸ್ನೇಹಿತರೆಲ್ಲರನ್ನು ಉದ್ದೇಶಿಸಿ ಈ ಮಸೀದಿಯನ್ನು ಜನರಿಂದ ತುಂಬಿಸುವುದು ಮುರಬ್ಬಿಯವರ ಕೆಲಸ ಮಾತ್ರವಲ್ಲ ಅದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ನಾವೆಲ್ಲರೂ ತಬ್‌ಲೀಗ್‌ನಲ್ಲಿ ತೊಡಗಬೇಕು.

Esaw Gebre ಸಾಹಿಬ್ ಒಬ್ಬ ಆಸ್ಟ್ರೇಲಿಯದ ಓರ್ವ ನವ ಅಹ್ಮದಿಯಾಗಿದ್ದಾರೆ ಅವರು ಮದಲು ಬೈಅತ್ ಮಾಡುದ್ದರು ಆದರೆ ಅಹ್ಮದೀಯರಲ್ಲದವರ ಆಕ್ಷೇಪಣೆಗಳಿಂದ ಸ್ವಲ್ಪಮಟ್ಟಿಗೆ ಪ್ರಭಾವಿತರಾಗಿದ್ದರು ಮತ್ತು ವಿಶೇಷವಾಗಿ ಜಲ್ಸದ ಕುರಿತು ಈ ಜಲ್ಸವು ಧರ್ಮದ್ರೋಹಿ ಎಂಬ ಆಕ್ಷೇಪಣೆಯಿಂದ ಪ್ರಭಾವಿತರಾಗಿದ್ದರು. ಅವರು ಆಸ್ಟ್ರೇಲಿಯಾದ ಮಸ್ಜಿದ್ ಬೈತ್ ಅಲ್–ಮಸ್ರೂರ್‌ನಲ್ಲಿ ಆಲಮಿ ಬೈಅತ್‌ನಲ್ಲಿ ಭಾಗವಹಿಸಿದರು ಮತ್ತು ಜಲ್ಸಾವು ಅಲ್ಲಾಹನಿಗಾಗಿಯೇ ನಡೆಯುವುದನ್ನು ನಾನು ಸ್ಪಷ್ಟವಾಗಿ ನೋಡಿದ್ದರಿಂದ ನನ್ನ ಎಲ್ಲಾ ಆಕ್ಷೇಪಣೆಗಳು ಮತ್ತು ಅನುಮಾನಗಳನ್ನು ದೂರ ಮಾಡಲಾಗಿದೆ ಎಂದು ಹೇಳಿದರು. ನನ್ನ ನಂಬಿಕೆಯನ್ನು ನವೀಕರಿಸಲು ಇದು ನನಗೆ ಒಂದು ಅವಕಾಶವಾಗಿತ್ತು. ಆಕಮಿ ಬೈಅತ್‌ನ ಸಂದರ್ಭದಲ್ಲಿ ಖಲೀಫ ಅವರೊಂದಿಗೆ ಪ್ರಾರ್ಥನೆಯಲ್ಲಿ ಭಾಗವಹಿಸುವ ಮೂಲಕ, ನನ್ನ ಪ್ರಾರ್ಥನೆಗಳಿಗೆ ಉತ್ತರಿಸಲಾಗುವುದು ಎಂದು ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ.

ಜಲ್ಸದ ಕಾರ್ಯಕ್ರಮಗಳನ್ನು ನೋಡಿಕೊಂಡು ವಿಶ್ವಾಸವು ದೃಢವಾಗುತ್ತದೆ. ಆಸ್ಟ್ರೇಲಿಯದ ಒಬ್ಬ ನವ ಅಹ್ಮದಿಯಾದ ಮಕಿಯಾಸ್ ಗ್ಯಾಬ್ರಿ ಸಾಹಿಬ್ ಹೇಳುತ್ತಾರೆ: ಜಾಗತಿಕ ಬೈಅತ್ ನನಗೆ ಆಶ್ಚರ್ಯಕರವಾದ ಅನುಭವವಾಗಿತ್ತು. ಆ ಸಮಯದಲ್ಲಿ ನಾನು ಯಾವ ಆಧ್ಯಾತ್ಮಿಕ ಅವಸ್ಥೆಯಿಂದ ಸಾಗಿದನೋ ಅಂತಹ ಅವಸ್ಥೆ ಹಿಂದೆಂದೂ ನಾನು ಅನುಭವಿಸಿಲ್ಲ. ಅದು ನನಗೆ ಮನಶ್ಶಾಂತಿ ಮತ್ತು ನೆಮ್ಮದಿ ನೀಡಿದ ಒಂದು ಆಧ್ಯಾತ್ಮಿಕ ಸ್ಥಿತಿಯಾಗಿತ್ತು.

ನವ ಅಹ್ಮದಿಯಾದ ಯೂಸುಫುಲ್ ಜೈಸಾ ಸಾಹಿಬ್ ಹೇಳುತ್ತಾರೆ: ಇದು ನನ್ನ ಮೊದಲ ಜಲ್ಸ ಆಗಿದೆ. ನಾನು ಮೊದಲ ಬಾರಿ ಖ಼ಲೀಫತುಲ್ ಮಸೀಹ್‌ರನ್ನು ನೋಡಿದೆ. ಸಮಾಜದ ದುರ್ಬಲತೆ ಮತ್ತು ಕೆಡುಕುಗಳನ್ನು ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ಹೇಗೆ ಸುಧಾರಿಸುವುದು ಎಂದು ಅವರು ಹೇಳಿದ ಹಾಗೆ ನಾನು ಇಂದಿನ ತನಕ ಎಲ್ಲಿಯೂ ಕೇಳಿಲ್ಲ. ನಾನು ಕ್ರೈಸ್ತ ಧರ್ಮದಲ್ಲೂ ಇದನ್ನು ಕಲಿತಿಲ್ಲ.

ನಾನು ಅಹಮದಿಯತ್ತಿನ ಬಗ್ಗೆ ಸಂಶೋಧಿಸುತ್ತಿರುವಾಗ ಮತ್ತು ನಾನು ಮೊದಲು ಕಾಲಘಟ್ಟದ ಖಲೀಫರ ಚಿತ್ರವನ್ನು ನೋಡಿದಾಗ, ಸರ್ವಶಕ್ತನಾದ ಅಲ್ಲಾಹನು ನನಗೆ ಕನಸಿನಲ್ಲಿ ಹೇಳಿದನು ಇದು ನಿಜವಾದ ಧರ್ಮವಾಗಿದೆ. ನಾನು ಅಹ್ಮದಿಯತ್ತಿನ ಕಡೆಗೆ ನಾನು ಬಂದಿದ್ದೇನೆ ಮತ್ತು ನಿಜವಾದ ಇಸ್ಲಾಂ ಧರ್ಮವನ್ನು ಕಂಡುಕೊಳ್ಳುವುದು ವಾಸ್ತವವಾಗಿ

ಸರ್ವಶಕ್ತನಾದ ಅಲ್ಲಾಹನ ಮಾರ್ಗದರ್ಶನವಾಗಿದೆ, ಇದು ಸಮಯದ ಖಲೀಫನನ್ನು ನೋಡಿದ ನಂತರ ನನಗೆ ಸಿಕ್ಕಿತು. ಹೀಗೆ ನನ್ನ ಜೀವನದಲ್ಲಿ ಮೊದಲ ಬಾರಿಗೆ ಜಲ್ಸಾವನ್ನು ನೋಡಿದಾಗ ಮತ್ತು ಜಾಗತೀಕ ಬೈಅತ್‌ನ ಭಾವಪೂರ್ಣ ದೃಶ್ಯಗಳನ್ನು ನೋಡಿದಾಗ ನನ್ನಲ್ಲಿ ಹೊಸ ಜೀವನವು ಸ್ವಾಧೀನಪಡಿಸಿಕೊಂಡಂತೆ ಅದನ್ನು ಸೇರಿಕೊಂಡ ನಂತರ ನನ್ನೊಳಗೆ ಬದಲಾವಣೆಯನ್ನು ಅನುಭವಿಸಿದೆ.

ಅಲ್ಬೇನಿಯಾದ ಪೆಲಂಬ್ ಬೇಜಾ ಜರ್ಮನಿಯಲ್ಲಿ ಇತಿಹಾಸ ಶಿಕ್ಷಕರಾಗಿದ್ದಾರೆ. ಅವರು ಮೂರ್ನಾಲ್ಕು ವರ್ಷಗಳ ಹಿಂದೆ ಬೈಅತ್ ಮಾಡಿದರು. ಈ ವರ್ಷ ಜಲ್ಸಾ ಸಾಲಾನ ಯುಕೆಯಲ್ಲಿ ಭಾಗವಹಿಸುವಿಕೆಯು Virtually ಆಗಿತ್ತು ಆದರೆ ನಾನು ಅದರಲ್ಲಿ ವೈಯುಕ್ತಿಕವಾಗಿ ತೊಡಗಿಸಿಕೊಂಡಿದ್ದೇನೆ ಎಂದು ನನಗೆ ಅನಿಸಿತು ಎಂದು ಅವರು ಹೇಳುತ್ತಾರೆ. ಜಲ್ಸದ ವಾತಾವರಣ ಮತ್ತು ಕಾಲಘಟ್ಟದ ಖಲೀಫಾ ಅವರ ಭಾಷಣದ ಪರಿಣಾಮವು ತುಂಬಾ ದೊಡ್ಡದಾಗಿದೆ, ನಾನು ಜಲ್ಸದಲ್ಲಿ ದೈಹಿಕವಾಗಿ ಸಹ ಇದ್ದೇನೆ ಎಂದು ನಾನು ಭಾವಿಸಿದೆ.

ಜಮಾಅತ್‌ನಲ್ಲಿ ಏಕತೆ ಇದೆ ಎನ್ನುವುದಕ್ಕೆ ಈ ಜಾಗತಿಕ ಜಲ್ಸ ಸಾಲಾನ ಸಾಕ್ಷಿಯಾಗಿದೆ. ಇಡೀ ಪ್ರಪಂಚದ ಅಹ್ಮದಿಯರು ಕಾಲಘಟ್ಟದ ಖಲೀಫರ ಕೈಯಲ್ಲಿ ಒಟ್ಟುಗೂಡುತ್ತಾರೆ. ಎಲ್ಲಾ ಅಹ್ಮದಿ ಸ್ನೇಹಿತರು ತಮ್ಮ ಕರ್ತವ್ಯಗಳನ್ನು ಅರ್ಥಮಾಡಿಕೊಳ್ಳಲು ಬಯಸುತ್ತಾರೆ. ಮತ್ತು ಎಲ್ಲಾ ಜನರು ಕಾಲಘಟ್ಟದ ಖಲೀಫ ಅವರ ಸೂಚನೆಗಳನ್ನು ಕೇಳಲು ಕಾಯುತ್ತಿದ್ದಾರೆ ಮತ್ತು ಅವುಗಳನ್ನು ಅನುಸರಿಸಲು ಬಯಸುತ್ತಾರೆ ಎಂದು ಅವರು ಹೇಳುತ್ತಾರೆ. ಅವರು ತಮ್ಮ ಸಮಾರೋಪ ಭಾಷಣದಲ್ಲಿ ಅತ್ಯಂತ ಸರಳವಾದ ಪದಗಳಲ್ಲಿ ನಮಗೆ ಸ್ಪಷ್ಟವಾದ ಸೂಚನೆಗಳನ್ನು ನೀಡಿದರು ಮತ್ತು ಈ ಪದಗಳು ಸಮಾಜದ ಪ್ರತಿಯೊಂದು ವರ್ಗಕ್ಕೂ ಸುಲಭವಾಗಿ ಅರ್ಥವಾಗುವಂತಿವೆ ಎಂದು ಅವರು ಹೇಳಿದರು. ಈ ಸಂಬೋಧನೆಯು ನಮ್ಮ ಜವಾಬ್ದಾರಿಗಳ ಮುಂದೆ ನಿಲ್ಲುವಂತೆ ಮಾಡುತ್ತದೆ. ವಿಶೇಷವಾಗಿ ನಮಗೆ, ಅಲ್ಬೇನಿಯನ್ ಸಮಾಜದಲ್ಲಿ ವಾಸಿಸುವ, ಅಲ್ಲಿ ಮಹಿಳೆಯರ ಹಕ್ಕುಗಳ ವಿಷಯದಲ್ಲಿ ಅನೇಕ ಸಮಸ್ಯೆಗಳಿವೆ.

ನೈಜೀರಿಯ ರೀಜನಿನ ಮಹಿಳೆಯಾದ ಗೂನ ರೋಮ್‌ಜಿ ಸಾಹಿಬ ಹೇಳುತ್ತಾರೆ: ಇಂದು ನಾನು ಲಜ್ನದಲ್ಲಿ ಖಲೀಫತುಲ್ ಮಸೀಹ್‌ರ ಭಾಷಣವನ್ನು ಆಲಿಸಿ ನನಗೆ ಮಹಿಳೆಯರ ಹಕ್ಕುಗಳು ಮತ್ತು ಕರ್ತವ್ಯಗಳ ಸರಿಯಾದ ಅರಿವು ಲಭಿಸಿತು. ಹಝ್ರತ್ ಅಮ್ಮಾ ಜಾನ್ ಹೇಗೆ ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಿದ್ದರು ಮತ್ತು ಅವರ ತರಬೇತಿ ಹೇಗೆ ಮಾಡುತ್ತಿದ್ದರು ಎಂಬುದರ ಬಗ್ಗೆ ಖಲೀಫತುಲ್ ಮಸೀಹ್ ಹೇಳಿದಾಗ, ನಾನು ಕೂಡ ಇಂದಿನಿಂದ ನನ್ನ ಮಕ್ಕಳ ತರಬೇತಿ ಕಡೆಗೆ ವಿಶೇಷ ಗಮನ ಹರಿಸುವೆನು ಎಂದು ಪ್ರತಿಜ್ಞೆ ಮಾಡಿದೆ.

ಸರ್ವಶಕ್ತನಾದ ಅಲ್ಲಾಹನು ಹೇಗೆ ಬದಲಾವಣೆಗಳನ್ನು ಸೃಷ್ಟಿಸುತ್ತಿದ್ದಾನೆ ನೋಡಿ.

ಏಡಿಲೇಡಿನ ಮುಬಲ್ಲಿಗ್ ಆದ ಆತಿಫ್ ಝಾಹಿದ್ ಸಾಹಿಬ್ ಬರೆಯುತ್ತಾರೆ: ಲಂಡನ್ ಮತ್ತು ಏಡಿಲೇಡಿನ ಸಮಯದಲ್ಲಿ 8.30 ಗಂಟೆಯ ವ್ಯತ್ಯಾಸವಿದೆ. ಜಲ್ಸದ ಎಲ್ಲ ಪ್ರೋಗ್ರಾಮುಗಳು ತಡ ರಾತ್ರಿ ಪ್ರಸಾರವಾಗಲಿತ್ತು. ಜನರು ಬರುವರೋ ಎಂಬ ಚಿಂತೆಯಿತ್ತು. ಆದರೆ ಜನರು ಅಸಾಧಾರವಣವಾದ ನಿಷ್ಠೆಯಿಂದ ಮಸೀದಿಗೆ ಬಂದಿದ್ದರು. ಭಾಷಣವನ್ನು ಆಲಿಸಿದರು, ಜಾಗತಿಕ ಬೈಅತ್ತಿನ ವೇಳೆಯೂ ಹಾಜರಿದ್ದರು. ರಾತ್ರಿ ಮೂರು ಗಂಟೆಯ ತನಕ ಸಮಾರೋಪ ಭಾಷಣವನ್ನು ಆಲಿಸಿದರು. ಅವರಿಗೆ ಖಿಲಾಫತಿನೊಂದಿಗೆ ಇದ್ದ ಪ್ರೇಮ ನೋಡಲೇ ಬೇಕಾದದ್ದು ಆಗಿತ್ತು. ಇದಕ್ಕಾಗಿ ಅವರು ಎಂ.ಟಿ.ಎ.ಗಾಗಿಯೂ ಧನ್ಯರಾಗಿರುವರು.

ಖಝಾಕಿಸ್ತಾನದ ಗಲಿಯಾನ್ ಮಕೀನ್ ಸಾಹಿಬ ಹೇಳುತ್ತಾರೆ: ಜಲ್ಸ ಸಾಲಾನ ಅಲ್ಲಾಹನ ಅನುಗ್ರಹದಿಂದ ವಿಜಯಕರವಾಗಿ ಮುಕ್ತಾಯಗೊಂಡಿತು. ವಿವಿಧ ವಿಷಯಗಳಲ್ಲಿ ಖಲೀಫತುಲ್ ಮಸೀಹ್ ಮತ್ತು ಇತರ ಭಾಷಣಗಾರರ ಭಾಷಣಗಳು ಬಹಳ ಪ್ರಯೋಜನಕಾರಿ ಮತ್ತು ಆಸಕ್ತಿದಾಯಕವಾಗಿತ್ತು. ಈ ಭಾಷಣಗಳು ನನ್ನ ಹೃದಯದಲ್ಲಿ ಒಂದು ವಿಶೇಷವಾದ ಪ್ರಭಾವ ಬೀರಿತು. ನಾನು ತಬ್ಲೀಗ್ ಮಾಡುವ ರೀತಿಯನ್ನು ಕೂಡ ಕಲಿತೆನು. ಇತರ ಕೇಳುಗರಿಗೂ ತಮ್ಮ ಸವಾಲುಗಳಿಗೆ ಉತ್ತರ ಲಭಿಸಿರಬಹುದು ಎಂದು ನಾನು ದೃಢವಾಗಿ ನಂಬುತ್ತೇನೆ. ಅಲ್ಲಾಹನು ನನಗೆ ಬೈಅತ್ ನವೀಕರಿಸಲು ಕೂಡ ಸೌಭಾಗ್ಯ ನೀಡಿದನು. ಅಲ್ಲಾಹನು ಜನರ ಹೃದಯಗಳನ್ನು ಮತ್ತು ಕಣ್ಣುಗಳನ್ನು ತೆರೆಯಲಿ. ಅವರು ಸನ್ಮಾರ್ಗವನ್ನು ಸ್ವೀಕಾರ ಮಾಡುವವರಾಗಲಿ.

ಯಮನಿನ ಶೀಮ ಖಾಸಿಂ ಸಾಹಿಬ ಹೇಳುತ್ತಾರೆ: ನಾವು ಜಲ್ಸದ ಕಾರ್ಯಕ್ರಮಗಳನ್ನು ನೋಡಿದೆವು. ನಾವು ಸ್ವರ್ಗದಲ್ಲಿದ್ದೇವೆ ಮತ್ತು ಇಸ್ಲಾಮಿನ ಸೂರ್ಯ ನಮ್ಮ ಮೇಲೆ ಉದಯಿಸಿದೆ ಹಾಗೂ ನಮ್ಮ ಹೃದಯಗಳು ಮತ್ತು ಆತ್ಮಗಳಿಗೆ ತಾಜಾತನ ನೀಡಿದೆ ಎಂದು ಅನುಭವವಾಗುತ್ತಿತ್ತು. ನಮ್ಮಲ್ಲಿ ಯಥಾರ್ಥ ವಿಶ್ವಾಸ, ಪ್ರೇಮ, ಐಕ್ಯ ಮತ್ತು ನೈತಿಕತೆಯ ಆತ್ಮ ಊದಲ್ಪಟ್ಟಿದೆ, ನಾವು ನಿಮ್ಮಿಂದ ದೂರವಿದ್ದೆವು. ಆದರೆ ನಮ್ಮ ಹೃದಯಗಳು ನಿಮ್ಮ ಜೊತೆಗೆ ಇದ್ದುವು, ನಾವು ಒಂದೇ ಮನೆಯಲ್ಲಿ ಇದ್ದೆವು, ಒಬ್ಬ ಅಹ್ಮದಿಯಲ್ಲದೇ ಬೇರೆ ಯಾರೂ ಈ ಸಂಬಂಧವನ್ನು ಅನುಭವಿಸಲಾರ. ನಮ್ಮ ದೇಶದಲ್ಲಿ ಭಾರಿ ಮಳೆಯಿರುವ ಸಮಯವಾಗಿದ್ದರೂ ಜಲ್ಸದ ಮೂರು ದಿನಗಳು ಹವಾಮಾನ ಸರಿಯಾಗಿತ್ತು. ಅಲ್ಲಾಹನ ಅನುಗ್ರಹದಿಂದ ನಾವು ಜಲ್ಸದ ಎಲ್ಲ ಕಾರ್ಯಕ್ರಮಗಳನ್ನು ನೋಡಿದೆವು. ಕೃಪಾಳುವಾದ ಅಲ್ಲಾಹನು ಖಿಲಾಫತನ್ನು ಸದಾ ನೆಲೆನಿಲ್ಲಿಸಲಿ. ಇದಿಲ್ಲದೇ ನಮಗೆ ಯಾವುದೇ ಅಸ್ತಿತ್ವ ಮತ್ತು ಗುರಿಯಿಲ್ಲ.

ಕಬಾಬೀರಿನ ಒಬ್ಬ ಅರಬ್ ಮಹಿಳೆಯಾದ ದುಆ ಸಾಹಿಬ ಹೇಳುತ್ತಾರೆ: ನಿಮ್ಮ ಭಾಷಣದ ನೋಟ್ಸ್ ಬರೆಯಲು ಪ್ರಯತ್ನಿಸುತ್ತಿದ್ದೆ. ಮಹಿಳೆಯರ ಹಕ್ಕುಗಳ ಬಗ್ಗೆ ನೀವು ಗಮನ ಹರಿಸಿದ್ದಕ್ಕೆ ನಾನು ಧನ್ಯೆಯಾಗಿರುವೆ. ನನ್ನ ಹಕ್ಕುಗಳು ಮತ್ತು ಭಾವನೆಗಳನ್ನು ಸಂರಕ್ಷಿಸುವ ಧರ್ಮದ ನಾನು ಧರ್ಮಾವಲಂಬಿಯಾಗಿರುವೆ. ಈ ಎಲ್ಲ ಸಂಗತಿಗಳನ್ನು ನನ್ನ ಮುಸ್ಲಿಮೇತರ ಗೆಳತಿಯರಿಗೆ ಹೇಳಲು ನಾನು ಹೆಮ್ಮೆಪಡುತ್ತೇನೆ.

ನಾವು ನಿಜವಾಗಿಯೂ ಖಲೀಫರ ಜೊತೆಗೆ ಇದ್ದೇವೆ ಮತ್ತು ನಮ್ಮ ನಡುವೆ ಯಾವುದೇ ದೇಶ ಮತ್ತು ಯಾವುದೇ ಸಮುದ್ರವಿಲ್ಲವೆಂದು ಬೈಅತಿನ ಸಮಯದಲ್ಲಿ ಅನಿಸುತ್ತಿತ್ತು. ಇಂತಹ ಸಂತೋಷದ ಅನುಭವದಿಂದ ನನ್ನ ಹೃದಯ ಒಡೆದು ಹೋಗುವುದು ಎಂದು ಅನಿಸುತ್ತಿದೆ.

ಜೋರ್ಡಾನ್‌ನ ಮಹಿಳೆ ಉಮ್ ಅಲ್-ಶಾಫಿ ಸಾಹಿಬ್, ಜಲ್ಸ ಸಾಲಾನದ ಮೊದಲ ದಿನ ನಾನು ನಿಮ್ಮ ಭಾಷಣವನ್ನು ಕೇಳಿದೆ ಎಂದು ಬರೆಯುತ್ತಾರೆ. ನನ್ನ ಜವಾಬ್ದಾರಿಯ ಅರಿವಾಗುತ್ತಿದ್ದಂತೆ ಮೈ ನಡುಗಿತು. ಎರಡನೆ ದಿನದ ಕಾರ್ಯಕ್ರಮದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಕಾಲಘಟ್ಟದ ಖಲೀಫರ ಬಗ್ಗೆ ವಾಗಾಂಡಾ ಎಂಬ ಊರಿನ ಅಹ್ಮದೀಯರ ಪ್ರೀತಿಯನ್ನು ನೋಡಿದೆನು. ಈ ಊರಿನವರು ತೀರಾ ಹಿಂದುಳಿದಿದ್ದರೂ ಮತ್ತು ಇಲ್ಲಿನ ನಿವಾಸಿಗಳು ಜೀವನಾವಶ್ಯಕವಾದ ಜೀವನಾವಶ್ಯಕತೆಗಳಿಂದಲೂ ವಂಚಿತರಾಗಿದ್ದರೂ ಇಂದಿಗೂ ಈ ಊರಿನ ಮುಖಂಡರೊಬ್ಬರ ಮಾತು ಕೇಳಿ ಕಣ್ಣಲ್ಲಿ ನೀರು ಬಂತು. ಅವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕ ಮತ್ತು ವಾಗ್ದತ್ತ ಮೆಸ್ಸೀಹನನ್ನು ಪ್ರೀತಿಸುತ್ತೇನೆ ಎಂದು ಹೇಳುತ್ತಿದ್ದರು. ಇವು ಮೇಲ್ನೋಟಕ್ಕೆ ಸರಳವಾದ ಪದಗಳಾಗಿದ್ದವು, ಆದರೆ ಅವು ನನ್ನ ಹೃದಯದ ಮೇಲೆ ಆಳವಾದ ಪರಿಣಾಮವನ್ನು ಬೀರಿದವು.

ನಂತರ ಈಜಿಪ್ಟ್‌ನ ಮಾರ್ವಾ ಅಬ್ದುಲ್ಲಾ ಸಾಹಿಬಾ ಇದ್ದಾರೆ ಅವರು ಹೇಳುತ್ತಾರೆ: ಅಮೀರುಲ್ ಮೊಮಿನೀನ್! ನಿಮ್ಮ ಭಾಷಣಗಳು ಮತ್ತು ಇತರ ಭಾಷಣಕಾರರ ಭಾಷಣಗಳ ಮೂಲಕ ನೀವು ಆಧ್ಯಾತ್ಮಿಕ ಸಂಪತ್ತಿನಿಂದ ನಮ್ಮ ಹೃದಯವನ್ನು ಶ್ರೀಮಂತಗೊಳಿಸಿದ್ದೀರಿ. ನಾನು ಆಧ್ಯಾತ್ಮಿಕತೆಯ ಆಕಾಶದಲ್ಲಿ ಹಾರಲು ಪ್ರಾರಂಭಿಸಿದೆ ಮತ್ತು ನನ್ನ ಭಗವಂತನನ್ನು ಭೇಟಿಯಾಗಲು ಉತ್ಸುಕನಾದೆ. ನೀವು ಹೇಳಿದ ಸಂತೃಪ್ತ ಆತ್ಮದ ಸ್ಥಿತಿಯನ್ನು ತಲುಪಲು ನಾನು ಬಯಸುತ್ತೇನೆ. ನನ್ನ ಮನಸ್ಸು ನಾನು ಸುತ್ತಮುತ್ತಲಿನ ಬಗ್ಗೆ ಅರಿವಿಲ್ಲದೆ ಅಲ್ಲಾಹನ ಸಂಪ್ರೀತಿಯಲ್ಲಿ ಕಳೆದುಹೋಗಬೇಕೆಂದು ಬಯಸುತ್ತದೆ. ನನ್ನ ದೇಹವು ನಿಜವಾಗಿಯೂ ಜನರ ಮುಂದೆ ಇರಬಹುದು, ಆದರೆ ನನ್ನ ಆತ್ಮವು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲಿನ ಪ್ರೀತಿಯ ಆಕಾಶದಲ್ಲಿ ಹಾದುಹೋಗಿದೆ.

ಅರಬ್ಬರು ವಿಶೇಷ ಕಲಡಯನ್ನು ಹೊಂದಿರುತ್ತಾರೆ. ಅವರು ಪದಗಳನ್ನು ಬಹಳ ಉತ್ತಮವಾಗಿ ಬಳಸುತ್ತಾರೆ ಮತ್ತು ಅವರು ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ವ್ಯಕ್ತಪಡಿಸುತ್ತಾರೆ. ಅಲ್ಲಾಹನು ಅವರಿಗೆ ವಿಶ್ವಾಸ ಮತ್ತು ನಂಬಿಕೆಯಲ್ಲಿ ಪ್ರಗತಿಯನ್ನು ನೀಡಲಿ.

ಮಲೇಶ್ಯದ ಒಬ್ಬ ನವ ಅಹ್ಮದಿಯಾದ ನರ್ಝ್‌ಲಾನ್ ಅರ್ಝ್‌ಗಾನ್ ಸಾಹಿಬ್ ಇರುವರು. ಬಹಳ ಸರಳ ವ್ಯಕ್ತಿಯಾಗಿದ್ದರು. ಬಹಳ ಸರಳ ಜೀವಿತವನ್ನು ಸಾಗಿಸುವವರಾಗಿದ್ದರು. ಸಾಂಪತ್ತಿಕ ಸ್ಥಿತಿಯೂ ಉತ್ತಮವಲ್ಲ. ಇಂಟರ್‌ನೆಟ್‌ನಲ್ಲಿ ಜಲ್ಸ ಆಲಿಸಲು ಅವರ ಬಳಿ ಹಣವೂ ಇದ್ದಿರಲಿಲ್ಲ. ಅವರು ಮನೆಯ ಮುಂದಿನ ಮರದಿಂದ ಮಾವಿನಹಣ್ಣನ್ನು ತೆಗೆದುಕೊಂಡು ಅವುಗಳನ್ನು ಮಾರಾಟ ಮಾಡಿ ಲಭಿಸಿದ ಹಣದಿಂದ ಇಂಟರ್‌ನೆಟ್ ಡೇಟ ಖರೀದಿ ಮಾಡಿ ಜಲ್ಸದ ಕಾರ್ಯಕ್ರಮಗಳನ್ನು ನೋಡಿದರು.

ಗಿನಿಯಾ-ಬಿಸ್ಸಾವ್‌ನ ಅಹ್ಮದೀಯೇತರ ಸ್ನೇಹಿತ ಆಸಿನಿ ಬಾಲ್ಡೆ ಸಾಹಿಬ್ ಅವರು ಜಲ್ಸದ ಕಾರ್ಯಕ್ರಮಗಳನ್ನು ಕೇಳಿದರು. ಜನರು ತಮ್ಮ ನಾಯಕನನ್ನು ಇಷ್ಟು ಪ್ರೀತಿ ಮತ್ತು ಗೌರವದಿಂದ ಕೇಳುವ ಇಂತಹ

ಕಾರ್ಯಕ್ರಮವನ್ನು ನಾನು ಇಲ್ಲಿಯವರೆಗೆ ನೋಡಿರಲಿಲ್ಲ ಎಂದು ಅವರು ಹೇಳುತ್ತಾರೆ. ಮತ್ತು ಜಾಗತಿಕ ಬೈಅತ್ನ ದೃಶ್ಯಗಳು ತುಂಬಾ ಸುಂದರವಾಗಿದ್ದವು, ಅವರು ಜಾಗತಿಕ ಬೈಅತ್‌ನ ದೃಶ್ಯವನ್ನು ಮಾತ್ರ ನೋಡಿದ್ದರು, ಅದರಲ್ಲಿ ಇಡೀ ಸಭೆಯು ಒಂದು ಕಡೆ ಒಗ್ಗೂಡಿತ್ತು. ಈ ದೃಶ್ಯಗಳನ್ನು ನೋಡಿದಾಗ, ಅಹ್ಮದಿಯಾ ಜಮಾಅತ್ ತನ್ನ ಖಲೀಫಾವನ್ನು ಸಂಪೂರ್ಣವಾಗಿ ಪಾಲಿಸುತ್ತದೆ ಮತ್ತು ಇದು ಅವರ ಪ್ರಗತಿಯ ರಹಸ್ಯವಾಗಿದೆ ಮತ್ತು ವಾಸ್ತವವಾಗಿ ಅಹ್ಮದಿಯಾ ಜಮಾಅತ್ ನಿಜವಾದ ಜಮಾಅತ್ ಮತ್ತು ನೀವು ಸರಿಯಾದ ಹಾದಿಯಲ್ಲಿದ್ದೀರಿ ಎಂದು ನನಗೆ ಮನವರಿಕೆಯಾಗಿದೆ.

ಮೆಕ್ಸಿಕೊನಿಂದ ಸುರಯ್ಯ ಗೋಮ್ಜ್ ಸಾಹಿಬ ಅವರು ಹೇಳುತ್ತಾರೆ: ಜಲ್ಸ ಸಾಲಾನ ಯುಕೆಯ ಭಾಷಣಗಳನ್ನು ಆಲಿಸಲು ನನಗೆ ಅವಕಾಶ ದೊರಕಿತು. ಸಮಾರೂಪ ಸಮಾರಂಭದ ಭಾಷಣವು ಅತ್ಯಂತ ಆಸಕ್ತಿದಾಯಕವಾಗಿತ್ತು, ಇದರಲ್ಲಿ ಮಹಿಳೆಯರ ಹಕ್ಕುಗಳನ್ನು ಉಲ್ಲೇಖಿಸಲಾಗಿದೆ ಮತ್ತು ಮನೆಯ ವಾತಾವರಣವನ್ನು ಹೇಗೆ ಸುಧಾರಿಸಬಹುದು. ಈ ಇಸ್ಲಾಮಿನ ಬೋಧನೆಗಳು ಹೇಗಿವೆ ಎಂದರೆ ಇವುಗಳನ್ನು ನಾನು ನನ್ನ ಸ್ವಂತ ಜೀವನದಲ್ಲಿ ಅನುಸರಿಸಲು ಪ್ರಯತ್ನಿಸುತ್ತೇನೆ. ಇದಲ್ಲದೆ, ಜಾಗತೀಕ ಬೈಅತ್ ಸಮಾರಂಭದಿಂದ ನಾನು ಬಹಳ ಭಾವುಕಳಾಗಿದ್ದೇನೆ. ಅದರ ಬಗ್ಗೆ ನಾನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ ಆದರೆ ನಾನು ಬಹಳ ಸಂತೋಷ ಮತ್ತು ಶಾಂತಿಯನ್ನು ಅನುಭವಿಸಿದೆ.

ಗಿನಿಬಸ್ಸಾವ್‌ನ ಓರ್ವ ನವ ಅಹ್ಮದಿ ಇದ್ದಾರೆ ಅವರು ತಮ್ಮ ಓರ್ವ ಜಮಾಅತ್ತಿನಲ್ಲದ ಮಹಿಳೆ ರ್‍ಯುಬ್-ಉನ್ನಿಸಾಳನ್ನು ಜಲ್ಸಾಗೆ ಕರೆತಂದರು. ಅವರು ಹೇಳುತ್ತಾರೆ ಜಲ್ಸಾದ ಮೂರು ದಿನಗಳ ಎಲ್ಲಾ ಕಾರ್ಯಕ್ರಮಗಳಲ್ಲಿ ವಿಷೇಶವಾಗಿ ನಿಮ್ಮ ಎಲ್ಲಾ ಭಾಷಣಗಳನ್ನು ಆಲಿಸಿದೆವು ಮತ್ತು ಕೊನೆಯ ದಿನ ಮಸೀದಿಯಲ್ಲಿ ಈ ಮಹಿಳೆಯು ಹೀಗೆ ಘೋಷಿಸಿದರು: ಅಹ್ಮದಿಯಾ ಜಮಾಅತ್‌ನ ಬಗ್ಗೆ ನನಗೆ ಅನೇಕ ಆಕ್ಷೇಪಗಳಿದ್ದವು, ಆದರೆ ನಿಮ್ಮ ಖಲೀಫಾ ಅವರ ಭಾಷಣಗಳನ್ನು ಆಲಿಸಿದ ನಂತರ, ನನ್ನ ಎಲ್ಲಾ ಆಕ್ಷೇಪಣೆಗಳು ಮಾಯವಾಗಿವೆ ಮತ್ತು ನಾನು ಅಹ್ಮದಿಯತ್ತಿಗೆ ಸೇರುವುದಾಗಿ ಘೋಷಿಸುತ್ತೇನೆ ಮತ್ತು ನನ್ನ ಮಗನನ್ನು ಅಹ್ಮದಿಯಾ ಜಮಾಅತ್‌ಗೆ ಅರ್ಪಿಸುತ್ತೇನೆ.

ಗಿನಿಬಸಾವಿನ ಒಂದು ಗ್ರಾಮದಲ್ಲಿ ಇರುವ ಮಹಿಳೆಯಾದ ಕಂಬಾ ಕೇಟ ಸಾಹಿಬ ಜಲ್ಸದಲ್ಲಿ ಭಾಗಿಯಾಗಿದ್ದರು. ಜಾಗತಿಕ ಬೈಅತ್ತಿನ ಬಗ್ಗೆ ಕೇಳಿದಾಗ ಅದರ ಬಗ್ಗೆ ಪ್ರಶ್ನಿಸಿದರು. ಮುಅಲ್ಲಿಂ ಸಾಹಿಬ್‌ರು ಹತ್ತು ಬೈಅತ್ ನಿಬಂಧನೆಯ ಬಗ್ಗೆ ಹೇಳಿದರು. ಹೀಗೆ ಆ ಮಹಿಳೆ ಬೈಅತ್ತಿನ ಕಾರ್ಯಕ್ರಮದಲ್ಲಿ ಭಾಗಿಯಾದರು. ಬೈಅತ್ತಿನ ಎಲ್ಲ ವಾಕ್ಯಗಳನ್ನು ಹೇಳಿದರು. ಸಮಾರೋಪ ಭಾಷಣವನ್ನು ಕೂಡ ಆಲಿಸಿದರು. ಕೊನೆಗೆ ಅವರು ಹೀಗೆ ಹೇಳಿದರು: ಜಾಗತಿಕ ಬೈಅತ್ತಿನ ಸಮಯದಲ್ಲೇ ನಾನು ಅಹ್ಮದಿಯ್ಯತ್ ಸ್ವೀಕಾರ ಮಾಡಿದ್ದೆ. ಈಗ ಭಾಷಣದ ನಂತರ ನಾನು ಹೇಳುತ್ತೇನೆ. ಮುಸ್ಲಿಂ ಸಮುದಾಯವನ್ನು ಅಹ್ಮದಿಯಾ ಖಿಲಾಫತ್ ಮಾತ್ರವೇ ಉಳಿಸಬಹುದು. ನಾನು ಅಹ್ಮದಿಯ್ಯತಿನಲ್ಲಿ ಪ್ರವೇಶಿಸುವುದಾಗಿ ಘೋಷಿಸುತ್ತೇನೆ. ಅಹ್ಮದಿಯ್ಯತ್ ಸ್ವೀಕಾರ ಮಾಡಲು ಮಕ್ಕಳನ್ನು ಕೂಡ ಉಪದೇಶಿಸುವೆ. ಏಕೆಂದರೆ, ಅಹ್ಮದಿಯ್ಯತ್ ಮಾತ್ರವೇ ನೈಜ ಇಸ್ಲಾಂ ಆಗಿದೆ.

ನಂತರ ಕಾಂಗೋ ಬ್ರಝಾವಿಲ್ಲೆಯದಲ್ಲಿ ವಿವಿಧ ಪಕ್ಷಗಳ ಮಿಷನರಿಗಳು ಒಟ್ಟಾಗಿ MTA ಆಫ್ರಿಕಾದಿಂದ ಜಲ್ಸದ ಎಲ್ಲಾ ಪ್ರಸಾರಗಳನ್ನು ವೀಕ್ಷಿಸಲು ಸಾಧ್ಯವಾಯಿತು ಮತ್ತು ಅನೇಕ ಜನರು ನೀಡಿದ ಭಾಷಣಗಳಿಂದ ಮತ್ತು ಅಲ್ಲಾಹನ ಅನುಗ್ರಹದಿಂದ ಪ್ರಭಾವಿತರಾದರು ಎಂದು ಬರೆಯುತ್ತಾರೆ. ಭಾಷಣಗಳು, ಜಲ್ಸಾದ ಕಾರ್ಯಕ್ರಮಗಳನ್ನು ಆಲಿಸಿದ ಕಾರಣ, ಆ ದಿನಗಳಲ್ಲಿ 23 ಜನರು ಬೈಅತ್ ಮಾಡಲು ಸಾಧ್ಯವಾಯಿತು.

ಕ್ರಿಶ್ಚಿಯಾನಿಟಿಗೆ ಸೇರಿದ ಕಾಂಗೋ ಬ್ರಝಾವಿಲ್ಲೆಯಿಂದ ಶ್ರೀ ಮಬೌರಾ ಬೆನ್ ಜೆಲಿ ಸಾಹಿಬ್ ಅವರನ್ನು ಜಲ್ಸಕ್ಕೆ ಆಹ್ವಾನಿಸಲಾಯಿತು. ಎರಡು ದಿನಗಳ ಕಾಲ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿದರು. ನನ್ನ ಮನಸ್ಸಿನಲ್ಲಿರುವ ಅಲ್ಲಾಹನ ಹಕ್ಕುಗಳು, ದಾಸರ ಹಕ್ಕುಗಳು, ಧರ್ಮನಿಷ್ಠೆ ಮತ್ತು ಕ್ಷಮೆಯ ಬಗ್ಗೆ ನಾನು ಎರಡು ದಿನಗಳಿಂದ ಇಲ್ಲಿ ಕೇಳುತ್ತಿದ್ದೇನೆ ಮತ್ತು ನನ್ನಲ್ಲಿ ಬದಲಾವಣೆಯನ್ನು ಅನುಭವಿಸುತ್ತೇನೆ, ಆದರೆ ಚರ್ಚ್‌ನಲ್ಲಿ ಕೇವಲ ಮಠಾಮಂತ್ರ ಅಥವಾ ಕೆಟ್ಟ ಆತ್ಮಗಳನ್ನು ತೆಗೆದು ಹಾಕುವುದು ಹೊರತು ಮತ್ತೇನೆ ಬೋಧಿಸಲಾಗುವುದಿಲ್ಲ. ಆದ್ದರಿಂದ ನಾನು ನಿಮ್ಮ ಜಮಾಅತ್ತಿನಲ್ಲಿ ಸೇರಲು ನಿರ್ಧರಿಸಿದ್ದೇನೆ ಏಕೆಂದರೆ ಇಲ್ಲಿ ನಾನು ಆಧ್ಯಾತ್ಮಿಕ ಶಾಂತಿಯನ್ನು ಕಂಡುಕೊಂಡಿದ್ದೇನೆ. ಹೀಗೆ ಅವರು ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರಿಕೊಂಡರು.

ಬುರ್ಕಿನಾ ಫಾಸೊದ ನವ ಮುಸ್ಲಿಂ ಸ್ನೇಹಿತ ಗ್ನಿಸ್ಸೆ ಬೆಸ್ಸಾ ಸಾಹಿಬ್ ಅವರು ಖಲೀಫತುಲ್ ಮಸೀಹ್ ಅವರನ್ನು ನೇರವಾಗಿ ನೋಡಿದ ನನ್ನ ಮೊದಲ ಅನುಭವವಾಗಿದೆ ಎಂದು ಹೇಳುತ್ತಾರೆ. ನಾನು ಇಸ್ಲಾಮಿಗೆ ಹೊಸದಾಗಿ ಮತಾಂತರಗೊಂಡಿದ್ದೇನೆ ಮತ್ತು ಜಗತ್ತು ಒಬ್ಬ ನಾಯಕನ ಅಡಿಯಲ್ಲಿ ಒಂದಾಗಬೇಕು ಎಂಬ ಪ್ರಶ್ನೆ ಯಾವಾಗಲೂ ನನ್ನ ಮನಸ್ಸಿನಲ್ಲಿ ಬರುತ್ತಿತ್ತು. ಈಗ ಇಲ್ಲಿ ನಾವು ಅಹ್ಮದಿಯಾ ಜಮಾಅತ್‌ನ ಜನರನ್ನು ನೋಡುತ್ತೇವೆ, ಆ ಐಕ್ಯತೆ ಗೋಚರಿಸುತ್ತದೆ, ಆದ್ದರಿಂದ ನಾನು ಅವರೊಂದಿಗೆ ಅಹ್ಮದಿಯಾ ಮಸೀದಿಯಲ್ಲಿ ಪ್ರಾರ್ಥಿಸಲು ಪ್ರಾರಂಭಿಸಿದೆ ಮತ್ತು ಇಂದು ನಾನು ಜಲ್ಸಾ ಸಾಲಾನ ಯುಕೆ ಮತ್ತು ಜಾಗತೀಕ ಬೈಅತ್‌ನಲ್ಲಿ ಸೇರಿಕೊಂಡಿದ್ದೇನೆ, ಇದರಲ್ಲಿ ಎಲ್ಲಾ ಅಹ್ಮದಿಯರು MTA ಯ ಮೂಲಕ ಭಾಗವಹಿಸಿದ್ದರು. ಇದೆಲ್ಲವನ್ನೂ ನಾನು ನನ್ನ ಕಣ್ಣಾರೆ ನೋಡಿದಾಗ ನನಗೆ ಸಮಾಧಾನವಾಯಿತು ಮತ್ತು ಎಲ್ಲರೂ ಒಂದೇ ಕಡೆ ಒಗ್ಗಟ್ಟಾಗ ಬೇಕು ಎಂಬ ನನ್ನ ಯೋಚನೆಗೆ ಮತ್ತು ನನ್ನ ಪ್ರಶ್ನೆಗೆ ಉತ್ತರವನ್ನು ಪಡೆದುಕೊಂಡೆ. ಆದ್ದರಿಂದ, ಇಂದಿನಿಂದ ನಾನು ಅಹ್ಮದಿಯತ್ತನ್ನು ಸ್ವೀಕರಿಸಲು ಘೋಷಿಸುತ್ತೇನೆ ಮತ್ತು ನನ್ನ ಕುಟುಂಬವನ್ನು ಸಹ ಖಿಲಾಫತ್ ಅನುಸರಿಸಲು ಕೇಳುತ್ತೇನೆ.

ಶ್ರೀಲಂಕಾದ ಜಮಆತ್ತಿನ ಅಧ್ಯಕ್ಷರು ಅಹ್ಮದಿಯತ್ತನ್ನು ಸ್ವಿಕರಿಸಿದ ಬಗ್ಗೆ ಬರೆಯುತ್ತಾರೆ, ಸ್ಥಳೀಯ ಜಮಾಅತ್‌ಗಳಲ್ಲಿ ಜಲ್ಸವನ್ನು ಸಾಮೂಹಿಕವಾಗಿ ಆಲಿಸಲು ವ್ಯವಸ್ಥೆ ಮಾಡಲಾಗಿತ್ತು. ದೇಶದ ಪರಿಸ್ಥಿತಿಯಿಂದಾಗಿ ತೀವ್ರ ಪ್ರಯಾಣ ಮತ್ತು ಸಾರಿಗೆ ತೊಂದರೆಗಳ ನಡುವೆಯೂ ಎಂಬತ್ತೈದು ಅಹ್ಮದಿ ಮತ್ತು ಅಹ್ಮದಿಯೇತರ ಜನರು ಕೊಲಂಬೊವಿನ ಜಮಾಅತ್ ಕೇಂದ್ರದಲ್ಲಿ ಜಲ್ಸಾ ಮತ್ತು ಜಾಗತಿಕ ಬೈಅತ್ ಕಾರ್ಯಕ್ರಮಕ್ಕೆ ಸೇರಿದರು. ಈ ಸಂಧರ್ಭದಲ್ಲಿ ಇಬ್ಬರು ಗೆಳೆಯರು ಬೈಅತ್ ಮಾಡಿ ಜಮಾಅತ್‌ಗೆ ಸೇರಿದರು. ಅದೇ ರೀತಿ, ನೊಗೊಂಬೊ, ಪಸಯಾಲ ಮತ್ತು ಪೊಲೊನ್ನರುವಾದಲ್ಲಿನ ಜಮಾಅತ್‌ನ ಸ್ನೇಹಿತರು ಲೈವ್ ಸ್ಟ್ರೀಮಿಂಗ್ ಮೂಲಕ ಸಾಮೂಹಿಕವಾಗಿ ಜಲ್ಸಾದಲ್ಲಿ ಸೇರಿಕೊಂಡರು ಮತ್ತು ಎಲ್ಲಾ ಕಾರ್ಯಕ್ರಮಗಳನ್ನು ತಮಿಳು ಭಾಷೆಗೆ ಅನುವಾದಿಸಲಾಗಿತ್ತು. ಈ ಕಾರ್ಯಕ್ರಮಗಳ ಫಲವಾಗಿ ನಾಲ್ವರು ಗೆಳೆಯರಿಗೆ ಅಹಮದಿಯತ್ತನ್ನು ಸ್ವೀಕರಿಸಲು ಅವಕಾಶ ಲಭಿಸಿತು.

ಅಲ್ಬೇನಿಯಾದ ಬಗ್ಗೆ ಒಂದು ವರದಿಯಾಗಿದೆ, ಅಲ್ಲಿ ಯೂಟ್ಯೂಬ್‌ನಲ್ಲಿ ಲೈವ್ ಅನುವಾದ ಪ್ರಸಾರವಾಗುತ್ತಿತ್ತು ಅದು ಅಲ್ಬೇನಿಯಾ, ಕೊಸೊವೊ, ಮ್ಯಾಸಿಡೋನಿಯಾ, ಜರ್ಮನಿ ಇತ್ಯಾದಿಗಳಲ್ಲಿ ಅಲ್ಬೇನಿಯನ್ನರು ಸಹ ಕೇಳುತ್ತಿದ್ದರು. ಜಮಾಅತ್ತಿನ ಬಗ್ಗೆ ಕಲಿಯುತ್ತಿರುವ ಓರ್ವ ಅಲ್ಬೇನಿಯನ್ ಮುಸ್ಲಿಮ್ ಸ್ನೇಹಿತ ಆಲ್ಬರ್ಟ್ ಸಾಹಿಬ್ ಅವರು ಮೊದಲ ಬಾರಿಗೆ ಜಲ್ಸಾ ಸಾಲಾನ ಯುಕೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದರು. ಜಲ್ಸ ಮುಗಿದ ನಂತರ, ಖಲೀಫತ್ ಅಲ್-ಮಸೀಹ್ ಅವರ ಭಾಷಣವು ಪವಿತ್ರ ಖುರ್‌ಆನ್‌ನ ಆಯತ್‌ಗಳು ಮತ್ತು ಪವಿತ್ರ ಪ್ರವಾದಿ(ಸ.ಅ) ಅವರ ಜೀವನ ಮತ್ತು ತರ್ಕಬದ್ಧ ವಾದಗಳೊಂದಿಗೆ ಸಜ್ಜುಗೊಂಡಿದೆ ಎಂದು ಅವರು ಹೇಳಿದರು, ಆದರೆ ಅದು ಬಹಳ ಸರಳ ಭಾಷಯಲ್ಲಿತ್ತು. ಮಹಿಳೆಯರ ಹಕ್ಕುಗಳ ಬಗ್ಗೆ ಆಕ್ಷೇಪಿಸುವವರ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನೂ ಅವರು ತಮ್ಮ ಇಂದಿನ ಭಾಷಣದಲ್ಲಿ ವಿವರಿಸಿದರು. ಹಿಂತಿರುಗಿದ ಸ್ವಲ್ಪ ಸಮಯದ ನಂತರ ಅವರು ಮತ್ತೆ ಕರೆ ಮಾಡಿದರು ಮತ್ತು ಅಹ್ಮದಿಯಾ ಜಮಾಅತ್ ಮತ್ತು ಜಲ್ಸಾದ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಮುಂದುವರೆಸಿದರು. ಅಹ್ಮದೀಯ ಜಮಾಅತ್ ನಿಜವಾದ ಇಸ್ಲಾಂ ಆಗಿದೆ ಎಂದು ಹೇಳಿದರು. ಬೈಅತ್‌ನ ಷರತ್ತುಗಳನ್ನು ಪ್ರಸ್ತಾಪಿಸಿದಾಗ, ಅವರು ಜಮಾಅತ್‌ನ ಅಲ್ಬೇನಿಯನ್ ಪುಸ್ತಕದ ಒಂದು ಉಲ್ಲೇಖವನ್ನು ಪ್ರಸ್ತುತಪಡಿಸುತ್ತ ಹೇಳಿದರು: ಅದರಲ್ಲಿ ಹತ್ತು ಬೈಅತ್‌ನ ಶರತ್ತುಗಳಿವೆ ಮತ್ತು ನಾನು ಅವುಗಳನ್ನು ಓದಿದ್ದೇನೆ ಮತ್ತು ಈಗ ನಾನು ಬೈಅತ್ ಮಾಡಲು ಸಿದ್ಧನಿದ್ದೇನೆ ಎಂದು ಹೇಳಿದರು. ಹೀಗೆ ಅವರು ಜಮಾಅತ್‌ಗೆ ಸೇರಿದರು.

ಕಾಂಗೋ ಬ್ರಾಝಾವಿಲ್ಲೆಯಲ್ಲಿನ ಮುಅಲ್ಲಿಮ್ ಸಾಹೇಬರು ಬರೆಯುತ್ತಾರೆ: ಓರ್ವ ಮಹಿಳೆ ಬಿಯೊಕೊ ಸ್ಟೀವಿ ಅವರ ಪತಿ ಈಗಾಗಲೇ ಅಹ್ಮದಿಯತ್ತನ್ನು ಸ್ವೀಕರಿಸಿದ್ದಾರೆ ಮತ್ತು ಅವರ ಪತ್ನಿಯೂ ಇಸ್ಲಾಂ ಧರ್ಮವನ್ನು ಸ್ವೀಕರಿಸಬೇಕೆಂದು ಅವರು ಬಯಸಿದ್ದರು. ಅವರೂ ತಬ್ಲೀಗ್ ಸಹ ಮಾಡುತ್ತಿದ್ದರು. ದುಆ ಸಹ ಮಾಡುತ್ತಿದ್ದರು ಆದರೆ ಅವರ ಪತ್ನಿಯು ಚರ್ಚ್ ಅನ್ನು ಬಿಡಲು ಸಿದ್ಧರಿರಲಿಲ್ಲ. ಜಲ್ಸಾ ಸಾಲಾನವನ್ನು ವೀಕ್ಷಿಸಲು ಆಹ್ವಾನಿಸಲಾಯಿತು. ಮೂರು ದಿನಗಳ ಕಾಲ ನಡೆದ ಜಲ್ಸದ ಕಾರ್ಯಕ್ರಮಗಳನ್ನು ನೋಡಿದ ಅವರು ಜಲ್ಸದ ಕೊನೆಯ ದಿನದಂದು ಆ ಮಹಿಳೆ ಹೇಳಿದರು: ನಾನು ಮೂರು ದಿನಗಳಿಂದ ನಮ್ಮ ಪಾದ್ರಿ

ಮತ್ತು ನಿಮ್ಮ ಖಲೀಫರ ಮಾತುಗಳನ್ನು ಹೋಲಿಕೆ ಮಾಡುತ್ತಿದ್ದೆ. ಖಲೀಫರ ಮಾತುಗಳು ಬಹಳ ಬಲಿಷ್ಠವಾಗಿದ್ದವು ಮತ್ತು ಎಲ್ಲ ಮಾತುಗಳು ಮನಸ್ಸಿಗೆ ತಲುಪುತ್ತಿತ್ತು ಎಂದು ಹೇಳಿ ಅವರು ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರ್ಪಡೆಯಾದರು.

ಇವು ನಾನು ಹೇಳಿದ ಜನರ ಕೆಲವು ಘಟನೆಗಳಾಗಿವೆ. ಜಲ್ಸಾದ ಸಂದರ್ಭದಲ್ಲಿ, ಜಲ್ಸಾದ ಪ್ರಕ್ರಿಯೆಯಲ್ಲಿ ನೀವು ನೋಡಿದಂತೆ, ಪ್ರಮುಖ ವ್ಯಕ್ತಿಗಳಿಂದ ಅನೇಕ ಸಂದೇಶಗಳು ಬಂದಿದ್ದವು. ಪ್ರಪಂಚದಾದ್ಯಂತದ ವಿವಿಧ ರಾಜಕಾರಣಿಗಳು ಮತ್ತು ನಾಯಕರಿಂದ 126 ಸಂದೇಶಗಳನ್ನು ಸ್ವೀಕರಿಸಲಾಗಿದೆ. ಅವುಗಳಲ್ಲಿ 101 ವೀಡಿಯೊಗಳು ಮತ್ತು 25 ಪತ್ರ ಸಂದೇಶಗಳು. ಮಂತ್ರಿಗಳು ಮತ್ತು ಸಂಸದರಿಂದ ಸಂದೇಶಗಳು ಬಂದವು. ಯುಕೆ ಹೊರತುಪಡಿಸಿ ಇತರ ದೇಶಗಳಿಂದ ಸಂದೇಶಗಳನ್ನು ಕಳುಹಿಸಿದವರಲ್ಲಿ ಯುಎಸ್, ಕೆನಡಾ, ಸೇರಾ ಲಿಯೋನ್, ಉಗಾಂಡಾ, ಲೈಬೀರಿಯಾ, ನ್ಯೂಜಿಲೆಂಡ್, ಸ್ಪೇನ್ ಮತ್ತು ನೆದರ್ಲ್ಯಾಂಡ್ಸ್ ಸೇರಿದ್ದಾರೆ. ಲೈವ್ ಸ್ಟ್ರೀಮಿಂಗ್ ವ್ಯವಸ್ಥೆಯು 53 ದೇಶಗಳಲ್ಲಿತ್ತು, ಆದ್ದರಿಂದ ಐವತ್ತೂರು ದೇಶಗಳ ಜನರು ಯುಕೆ ಜಲ್ಸದಲ್ಲಿ ಸೇರಿಕೊಂಡರು ಮತ್ತು ಯುರೋಪ್, ಆಫ್ರಿಕಾ, ಏಷ್ಯಾದಲ್ಲಿ ಮತ್ತು ಆ ಐವತ್ತೂರು ದೇಶಗಳಲ್ಲಿ 80 ದೇಶಗಳಿದ್ದವು ಅಲ್ಲಿಂದ ಜನರು ಸೇರಿದ್ದರು.

ಕೋವಿಡ್‌ನ ಕಾರಣದಿಂದಾಗಿ ಈ ವರ್ಷ ಪತ್ರಿಕಾ ಮತ್ತು ಮಾಧ್ಯಮ ಪ್ರಸಾರವನ್ನು ಸಾಮಾನ್ಯವಾಗಿ ಆಹ್ವಾನಿಸಲಾಗಿಲ್ಲ, ಆದರೆ ಎರಡು ಮಾಧ್ಯಮಗಳು ನಿರ್ದಿಷ್ಟವಾಗಿ ಹಾಜರಾಗಲು ಅನುಮತಿಯನ್ನು ಕೋರಿದವು. ಆದ್ದರಿಂದ ಅವರಿಗೆ ಅನುಮತಿ ನೀಡಲಾಯಿತು ಮತ್ತು ಪತ್ರಿಕಾ ವಿಭಾಗವು ಈ ಬಾರಿ ಜಲ್ಸಾ ಸಾಲಾನದ ಬಗ್ಗೆ ಜಗತ್ತಿಗೆ ಹೇಗೆ ತಿಳಿಸುವುದು ತುಂಬಾ ಸವಾಲಿನ ಸಂಗತಿಯಾಗಿತ್ತು. ಆದರೆ ಸರ್ವಶಕ್ತನಾದ ಅಲ್ಲಾಹನು ಸ್ವತಃ ಕವರೇಜ್ ಮಾಡಲು ಉಪಕರಣಗಳನ್ನು ರಚಿಸುವ ರೀತಿಯಲ್ಲಿ ವ್ಯವಸ್ಥೆ ಮಾಡಿದನು. ಮತ್ತು ಇಬ್ಬರು ಮಾಧ್ಯಮದವರು, ಬಿಬಿಸಿ ಮತ್ತು ಇನ್ನೊಂದು ಚಾನೆಲ್ ಕೂಡ ಬಂದಿದ್ದರು. ಇದರ ಹೊರತಾಗಿ BBC, ITV, Metro, LBC, BBC ರೇಡಿಯೋ ಸರ್ರೆ, BBC ಸೌತ್ ಟುಡೆ, BBC ನ್ಯೂಸ್ ವೆಬ್‌ಸೈಟ್ ಇತ್ಯಾದಿಗಳು ವ್ಯಾಪಕವಾದ ಪ್ರಸಾರವನ್ನು ನೀಡಿತು ಮತ್ತು ಇತರ ಮಾಧ್ಯಮಗಳು ಸಹ ಅದನ್ನೇ ನೀಡಿವೆ. ಹೀಗಾಗಿ, ಎಂಟು ಮಾಧ್ಯಮಗಳು ಪ್ರಾದೇಶಿಕ ಮಟ್ಟದಲ್ಲೂ ಜಲ್ಸದ ವರದಿ ಮಾಡಿವೆ. ಇದರ ಜೊತೆಗೆ, ಇಪ್ಪತ್ತೆಂಟು ವೆಬ್‌ಸೈಟ್‌ಗಳು ಜಲ್ಸದ ಬಗ್ಗೆ ಸುದ್ದಿ ಅಥವಾ ಲೇಖನಗಳನ್ನು ಪ್ರಕಟಿಸಿದವು. ಈ ವೆಬ್‌ಸೈಟ್‌ಗಳು ಇಪ್ಪತ್ತು ದಶಲಕ್ಷಕ್ಕೂ ಹೆಚ್ಚು ಜನರನ್ನು ತಲುಪುತ್ತವೆ. ಮುದ್ರಣ ಮಾಧ್ಯಮವನ್ನು ನೋಡಿದರೆ ಪತ್ರಿಕೆಗಳಲ್ಲಿ ಜಲ್ಸಾಕ್ಕೆ ಸಂಬಂಧಿಸಿದಂತೆ ಹದಿನಾಲ್ಕು ಲೇಖನಗಳು ಪ್ರಕಟವಾಗಿದ್ದು, ಈ ಪತ್ರಿಕೆಗಳ ಓದುಗರ ಸಂಖ್ಯೆ 1.2 ಮಿಲಿಯನ್. ಜಲ್ಸಾ ಸಾಲಾನವನ್ನು ವಿವಿಧ ಟಿವಿ ಚಾನೆಲ್‌ಗಳಲ್ಲಿ ಮೂವತ್ತೆರಡು ಕಾರ್ಯಕ್ರಮಗಳಲ್ಲಿ ಪ್ರಸಾರ ಮಾಡಲಾಯಿತು. ಈ ಟಿವಿ ಚಾನೆಲ್‌ಗಳ ವೀಕ್ಷಕರ ಸಂಖ್ಯೆ ಹನ್ನೆರಡು ಮಿಲಿಯನ್‌ಗಿಂತಲೂ ಹೆಚ್ಚು. ರೇಡಿಯೋ ಸ್ಟೇಷನ್‌ಗಳಲ್ಲಿನ ಮೂವತ್ತೂರು ಕಾರ್ಯಕ್ರಮಗಳು ಜಲ್ಸಾ ಸಾಲಾನ ಯುಕೆಯನ್ನು ಉಲ್ಲೇಖಿಸಿವೆ. ಈ ರೇಡಿಯೋ ಕೇಂದ್ರಗಳ ಕೇಳುಗರ ಸಂಖ್ಯೆ ಒಂದು ಮಿಲಿಯನ್‌ಗಿಂತಲೂ ಹೆಚ್ಚು. ಸಾಮಾಜಿಕ ಮಾಧ್ಯಮಗಳ ಮೂಲಕ, ಕೆಲವು ಮಾಧ್ಯಮಗಳು, ಪತ್ರಕರ್ತರು ಮತ್ತು ಸಾರ್ವಜನಿಕ ವ್ಯಕ್ತಿಗಳು ಜಲ್ಸಕ್ಕೆ ಸಂಬಂಧಿಸಿದಂತೆ ಸಂದೇಶಗಳನ್ನು ನೀಡಿದರು, ಇದು ಹನ್ನೆರಡು ದಶಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿತು. ಪತ್ರಿಕಾ ಮತ್ತು ಮಾಧ್ಯಮ ತಂಡವು ವೀಡಿಯೊವನ್ನು ಮಾಡಿ ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿತು, ಅದು 234,000 ಕ್ಕೂ ಹೆಚ್ಚು ಜನರನ್ನು ತಲುಪಿತು. ಒಟ್ಟಾರೆಯಾಗಿ, 57.5 ದಶಲಕ್ಷಕ್ಕೂ ಅಧಿಕ ಜನರಿಗೆ ಜಲ್ಸದ ಬಗ್ಗೆ ತಿಳಿಯಿತು.

ಪತ್ರಕರ್ತರಿಗೆ ಬರಲು ಅವಕಾಶವಿರಲಿಲ್ಲ ಮತ್ತು ಯುಕೆ ಜಮಾಅತ್‌ನ ತಬ್ಲೀಘ್ ವಿಭಾಗದ ಬೆಂಬಲದೊಂದಿಗೆ ಪತ್ರಿಕಾ ಮಾಧ್ಯಮ ತಂಡವು 32 ಪತ್ರಕರ್ತರಿಗೆ ಲಂಗರ್ ಆಹಾರವನ್ನು ಕಳುಹಿಸಿತು ಮತ್ತು ಅವರು ಸಹ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡಿದರು ಮತ್ತು ಪ್ರಶಂಸಿಸಿದರು. ಬಿ.ಬಿ.ಸಿ.ಯ ಜರ್ನಲಿಸ್ಟ್ ಆದ ಸೌತ್ ಎಡ್ವರ್ಡ್ ಸಾಲ್ಟ್ ಹೇಳುತ್ತಾರೆ: ನಾನು ಜಲ್ಸದಲ್ಲಿ ಬಹಳ ಉತ್ತಮವಾಗಿ ಸಮಯವನ್ನು ಕಳೆದೆ. ಅತಿಥಿ ಸತ್ಕಾರ ಬಹಳ ಉತ್ತಮವಾಗಿತ್ತು. ಅನೇಕ ಭಾಷಣಗಳನ್ನು ಆಲಿಸಿಯೂ ಬಹಳ ಸಂತೋಷವಾಯಿತು. ಮುಂದೆಯೂ ನಿಮ್ಮೊಂದಿಗೆ ಕೆಲಸ ಮಾಡುತ್ತೇನೆ. ನಿಮ್ಮ ಜಮಾಅತ್ತಿನ ಔದಾರ್ಯ ನೋಡಿ ಬೆಚ್ಚಿಬಿದ್ದೆ' ಎಂದು ಪತ್ರಕರ್ತೆ ಟಿವಿ ನಿತಾ ಹೇಳಿದರು. ಎಲ್ಲಾ ಧರ್ಮಗಳು ಮೂಲಭೂತವಾಗಿ ಒಂದೇ ಎಂದು ಪತ್ರಕರ್ತೆ ನತಾಶಾ ಡೆವೊನ್ ಹೇಳಿದರು. ಒಳ್ಳೆಯ ಜನರು ಜನರನ್ನು ಒಟ್ಟುಗೂಡಿಸಲು ಮತ್ತು ಬಡವರಿಗೆ ಸಹಾಯ ಮಾಡಲು ಧರ್ಮವನ್ನು ಬಳಸುತ್ತಾರೆ ಆದರೆ ಕೆಟ್ಟ ಜನರು ಕೆಟ್ಟದ್ದನ್ನು ಮಾಡಲು ಧರ್ಮವನ್ನು ಬಳಸುತ್ತಾರೆ ಮತ್ತು ಜಲ್ಸಾ ಸಾಲಾನವು ಖಂಡಿತವಾಗಿಯೂ ಒಳ್ಳೆಯ ಜನರಿಗೆ ಉದಾಹರಣೆಯಾಗಿದೆ.

MTA ಯಿಂದ ಜಲ್ಸಾ ವಾರ್ಷಿಕಕ್ಕೆ ಸಂಬಂಧಿಸಿದಂತೆ 1885 ಪೋಸ್ಟ್‌ಗಳು, ಫೋಟೋಗಳು ಮತ್ತು ವೀಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಲಾಗಿದೆ. ಈ ಮೂಲಕ ನಾಲ್ಕು ಮಿಲಿಯನ್ ಜನರಿಗೆ ಸುದ್ದಿ ತಲುಪಿದೆ. ಎರಡು ಲಕ್ಷದ ಹದಿಮೂರು ಸಾವಿರ ಮಂದಿ ಈ ಪೋಸ್ಟ್ ಗಳನ್ನು ಲೈಕ್ ಮಾಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅವರ ಬಗ್ಗೆ ಕಾಮೆಂಟ್‌ಗಳು ಬಂದಿದ್ದವು. 1236 ವೀಡಿಯೊಗಳನ್ನು ಅಪ್‌ಲೋಡ್ ಮಾಡಲಾಗಿದ್ದು, ಇದನ್ನು 231 ಸಾವಿರ ಜನರು ವೀಕ್ಷಿಸಿದ್ದಾರೆ ಮತ್ತು ಈ ವೀಕ್ಷಕರು ಕಳೆದ ಒಟ್ಟು ಸಮಯವನ್ನು ಲೆಕ್ಕ ಹಾಕಿದರೆ, ಅದು 470 ಸಾವಿರ ಗಂಟೆಗಳು. ಎಂಟಿಎ ವೆಬ್‌ಸೈಟ್‌ಗೆ ಇಪ್ಪತ್ತನಾಲ್ಕು ಸಾವಿರ ಜನರು ತೊಂಬತ್ತೆರಡು ಸಾವಿರ ಬಾರಿ ಭೇಟಿ ನೀಡಿದ್ದಾರೆ.

ಇಪ್ಪತ್ತು ಟಿವಿ ಚಾನೆಲ್‌ಗಳು ವಾರ್ಷಿಕ ಜಲ್ಸವನ್ನು ನೇರ ಪ್ರಸಾರ ಮಾಡುತ್ತವೆ ಎಂದು MTA ಆಫ್ರಿಕಾ ವರದಿ ಮಾಡಿದೆ. ಅವುಗಳಲ್ಲಿ ಕೆಲವು ಸರ್ಕಾರಿ ವಾಹಿನಿಗಳು ಮತ್ತು ಕೆಲವು ಖಾಸಗಿ ವಾಹಿನಿಗಳು. ದೇಶಾದ್ಯಂತ ಕೆಲವು ವಾಹಿನಿಗಳನ್ನು ವೀಕ್ಷಿಸಿದರು. ಈ ಚಾನಲ್‌ಗಳಲ್ಲಿ ಗ್ಯಾಂಬಿಯಾ ನ್ಯಾಷನಲ್ ಟಿವಿ, ಸೆರಾಲಿಯೋನ್ ನ್ಯಾಷನಲ್ ಟಿವಿ, ಲೈಬೀರಿಯಾ ನ್ಯಾಷನಲ್ ಟಿವಿ ಮತ್ತು ಹಲವಾರು ಖಾಸಗಿ ಚಾನೆಲ್‌ಗಳು ಸೇರಿವೆ. ಜಾಗತಿಕ ಪ್ರತಿಜ್ಞೆ ಸಮಾರಂಭಗಳನ್ನು ಸಹ ಅವುಗಳಲ್ಲಿ ತೋರಿಸಲಾಗಿದೆ. ನನ್ನ ಭಾಷಣಗಳನ್ನು ಇಪ್ಪತ್ತು ಟಿವಿ ಚಾನೆಲ್‌ಗಳು ತೋರಿಸಿದವು ಮತ್ತು ಮೂವತ್ತೈದು ಮಿಲಿಯನ್ ಜನರನ್ನು ತಲುಪಿದವು.

ಜಲ್ಸದ ನೇರ ಪ್ರಸಾರದ ಹೊರತಾಗಿ, ಜಲ್ಸಕ್ಕೆ ಸಂಬಂಧಿಸಿದ ಸುದ್ದಿಗಳನ್ನು ತಯಾರಿಸಿ ಆಫ್ರಿಕಾದಾದ್ಯಂತ ಕಳುಹಿಸಲಾಯಿತು. ಹಾಗಾಗಿ, ಜಲ್ಸಾದ ಮೂರು ದಿನಗಳಲ್ಲಿ, ಹದಿನೈದು ಚಾನೆಲ್‌ಗಳು ವಾರ್ಷಿಕ ಜಲ್ಸಾದ ಬಗ್ಗೆ ಸುದ್ದಿ ಪ್ರಸಾರ ಮಾಡಿತು, ಇದು ಹದಿನೈದು ಮಿಲಿಯನ್ ಜನರನ್ನು ತಲುಪಿತು.

ರಿವ್ಯೂ ಆಫ್ ರಿಲಿಜನ್ಸ್‌ನಿಂದ ಸಾಕಷ್ಟು ಕವರೇಜ್ ಕೂಡ ಇತ್ತು. ಅವರು ಸಾಮಾಜಿಕ ಮಾಧ್ಯಮ ಮತ್ತು ಯೂಟ್ಯೂಬ್ ಮೂಲಕ ಕವರೇಜ್ ಪಡೆದಿದ್ದಾರೆ. ಜಲ್ಸ ಸಾಲಾನಕ್ಕೆ ಸಂಬಂಧಿಸಿದಂತೆ ನಲವತ್ತು ಲೇಖನಗಳನ್ನು ಬರೆಯಲಾಗಿದೆ. 12 ವೀಡಿಯೊಗಳನ್ನು ರಚಿಸಲಾಗಿದೆ. 110 ಕ್ಕೂ ಹೆಚ್ಚು ಪೋಸ್ಟ್‌ಗಳನ್ನು ಸೇರಿಸಲಾಗಿದೆ. ಹೀಗೆ ಮೂರು ಲಕ್ಷ ಜನರಿಗೆ ಜಲ್ಸದ ಪ್ರಸಾರವಾಯಿತು.

ಹೀಗೆ ಅಲ್ಲಾಹನ ಅನುಗ್ರಹದಿಂದ ಅಲ್ಲಾಹನು ನಮಗೆ ನೀಡಿದ ಜಲ್ಸ ಸಾಲಾನದ ಅಸಂಖ್ಯಾತ ಫಲಗಳಿವೆ. ನಾನು ಹೇಳಿದಂತೆ ಸಂಭವಿಸಿದ ಘಟನೆಗಳು ಮತ್ತು ಸಂಭವಿಸಿದ ಅನಿಸಿಕೆಗಳ ಕೆಲವು ಉದಾಹರಣೆಗಳನ್ನು ನಾನು ಪ್ರಸ್ತುತಪಡಿಸಿದ್ದೇನೆ. ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯರ ವಿಶ್ವಾಸ ಮತ್ತು ನಂಬಿಕೆಯನ್ನು ಅಭಿವೃದ್ಧಿಪಡಿಸಲಿ ಮತ್ತು ಜಲ್ಸದ ಪರಿಣಾಮಗಳು ಶಾಶ್ವತವಾಗಿರಲಿ ಮತ್ತು ತಾತ್ಕಾಲಿಕವಾಗಿರಬಾರದು.

ನಮಾಝಿನ ನಂತರ, ನಾನು ಕೆಲವು ನಮಾಝೆ ಜನಾಝಗಳನ್ನು ನಿರ್ವಹಿಸುತ್ತೇನೆ ಮತ್ತು ನಿಧನ ಹೊಂದಿದವರ ಬಗ್ಗೆ ಉಲ್ಲೇಖಿಸುತ್ತೇನೆ. ಮೊದಲ ಉಲ್ಲೇಖವು ಕೆನಡಾದ ಮಾನ್ಯ ಕುದ್ರತುಲ್ಲಾ ಅದ್ನಾನ್ ಸಾಹಿಬ್ ಅವರ ಪತ್ನಿಯಾಗಿದ್ದ ಮುಕ್ರಾಮ ನುಸ್ರತ್ ಕುದ್ರತ್ ಸುಲ್ತಾನಾ ಸಾಹಿಬಾ ಅವರದ್ದು. ಅವರು ಐವತ್ತೈದನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ನವಾಝುಗಳನ್ನು ನಿರ್ವಹಿಸುವವರು, ತಹಜ್ಜುದ್ ನಮಝ್ ನಿರ್ವಹಿಸುವವರಾಗಿದ್ದರು, ಭಕ್ತಿ, ಪ್ರಾಮಾಣಿಕ ಮತ್ತು ದೇವದೂತರ ಗುಣಗಳುಲ್ಲ ಮಹಿಳೆಯಾಗಿದ್ದರು. ಅವರು ಆಸ್ಪತ್ರೆಯಲ್ಲಿದ್ದಾಗ ತಬ್ಲೀಗ್ ಮಾಡದ ವೈದ್ಯರೇ ಇರಲಿಲ್ಲ. ನುಸ್ರತ್ ಸಾಹಿಬಾ ಅವರಿಂದ ಪವಿತ್ರ ಖುರ್ಆನ್ ಅನ್ನು ಕೇಳಿಸಿಕೊಳ್ಳಲು ಬರುತ್ತಿದ್ದ ಒಬ್ಬ ಮುಸ್ಲಿಂ ಅರಬ್ ವೈದ್ಯರೂ ಇದ್ದರು ಮತ್ತು ಆಕೆಗೆ ಅವರು ಸೂರಾ ಯಾಸೀನ್ ಅನ್ನು ಪಠಿಸುತ್ತಿದ್ದರು. ಎಲ್ಲದರಲ್ಲೂ ಖಿಲಾಫತ್ ಅನ್ನು ಉಲ್ಲೇಖಿಸುತ್ತಿದ್ದರು. ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧವನ್ನು ಹೊಂದಿದ್ದರು. ಅವರ ಅನೇಕ ಸಂಬಂಧಿಕರು ಅಹಮದಿಯೇತರು ಸುನ್ನಿ ಜಮಾಅತ್ತಿಗೆ ಸೇರಿದ್ದವರಾಗಿದ್ದರು. ಅವರೆಲ್ಲರಿಗೂ ಅವರು ಸಂದೇಶವನ್ನು ಕಳುಹಿಸಿದರು, ನೀವು ಸಹ ಕಾಲಘಟ್ಟದ ಇಮಾಮ್‌ರನ್ನು ಸ್ವೀಕರಿಸಿ ಅವರ ಬೈಅತ್ ಮಾಡಬೇಕು ಎಂದು ತಬ್ಲೀಗ್ ಮಾಡುತ್ತಿದ್ದರು. ಅಗಲಿ ಹೋದವರಲ್ಲಿ ಪತಿಯನ್ನು ಹೊರತುಪಡಿಸಿ ಮೂವರು ಮಕ್ಕಳನ್ನು ಅಗಲಿದ್ದಾರೆ. ಅವರ ಓರ್ವ ಪುತ್ರ ರಝಿಯುಲ್ಲಾಹು ನುಮಾನ್ ಸಾಹಿಬ್ ಅವರು ಕೆನಡಾದ

ಜಾಮಿಯಾ ಅಹ್ಮದಿಯಾ ವಿದ್ಯಾರ್ಥಿಯಾಗಿದ್ದಾರೆ ಮತ್ತು ಒಬ್ಬ ಸಹೋದರ ಮತ್ತು ಒಬ್ಬ ಸಹೋದರಿ ಇದ್ದಾರೆ.

ಅವರ ಪತಿ ಹೇಳುತ್ತಾರೆ: ನನ್ನ ಪತ್ನಿ ವಾಖಿಫೆ ಝಿಂದಗಿಯಂತೆ ಬದುಕುತ್ತಿದ್ದಳು. ಮಕ್ಕಳ ತರಬೇತಿಗಾಗಿ ಅವರು ತಮ್ಮ ಸಂಪೂರ್ಣ ಶಕ್ತಿ ಮತ್ತು ಶ್ರಮವನ್ನು ವ್ಯಯಿಸಿದರು. ಖಿಲಾಫತ್ ಬಗ್ಗೆ ಅಪಾರ ಪ್ರೀತಿ ಮತ್ತು ಭಕ್ತಿ ಇತ್ತು. ನಾನು ಹೇಳಿದಂತೆ ಅವರಲ್ಲಿ ತಬ್ಲೀಗ್ ಮಾಡಲು ಉತ್ಸಾಹವಿತ್ತು ಅವರು ತಮ್ಮ ಮಕ್ಕಳಲ್ಲೂ ಈ ಉತ್ಸಾಹವನ್ನು ಬೆಳೆಸಿಕೊಂಡಿದ್ದಾರೆ ಮತ್ತು ಎಲ್ಲಾ ಮಕ್ಕಳೂ ತಬ್ಲೀಗ್‌ನ ಬಗ್ಗೆ ಉತ್ಸುಕರಾಗಿರುವುದನ್ನು ನಾನು ನೋಡಿದ್ದೇನೆ ಮತ್ತು ಸಾಮಾನ್ಯ ಉತ್ಸಾಹವಲ್ಲ, ಅಸಾಧಾರಣ ಉತ್ಸಾಹವನ್ನು ಹೊಂದಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಅವರ ಮಕ್ಕಳು ವಿಶೇಷ ತರಬೇತಿಯನ್ನು ಪಡೆದಿದ್ದಾರೆ ಮತ್ತು ಅವರೂ ಓದುವ ಅಭಿರುಚಿಯನ್ನು ಹೊಂದಿದ್ದಾರೆ. ಅಲ್ಲಾಹನು ಅವರಿಗೆ ಉತ್ತಮ ಕಲೆಯನ್ನು ನೀಡಿದ್ದಾನೆ. ಅವರ ಮೂಲಕ ಬೈಅತ್‌ಗಳು ಸಹ ಆಗುತ್ತವೆ. ನಾನು ಹೇಳಿದಂತೆ ರಝಿಯಲ್ಲಾಹು ನುಮಾನ್ ಎಂಬ ಅವರ ಪುತ್ರ ಕೂಡ ಜಾಮಿಯಾದಲ್ಲಿ ಇದ್ದಾನೆ, ಬಹಳ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಅಲ್ಲಾಹನು ಅವರಿಗೆ ಮತ್ತು ಉಳಿದ ಮಕ್ಕಳಿಗೆ ನಿಸ್ವಾರ್ಥವಾಗಿ ಧರ್ಮ ಸೇವೆ ಮಾಡುವ ಅವಕಾಶವನ್ನು ನೀಡಲಿ ಮತ್ತು ಈ ಎಲ್ಲಾ ಮಕ್ಕಳನ್ನು ಅವರ ತಾಯಿಯ ಪ್ರಾರ್ಥನೆಯ ವಾರಸುದಾರರನ್ನಾಗಿ ಮಾಡಲಿ. ತಾಯಿ ತುಂಬಾ ಸದ್ಗುಣಿ, ಧರ್ಮನಿಷ್ಠೆ ಮತ್ತು ಆದರ್ಶಪ್ರಾಯ ಅಹ್ಮದಿ ಮಹಿಳೆ ಎಂದು ಅವರ ಮಗ ಜರಿವುಲ್ಲಾ ಅದ್ನಾನ್ ಹೇಳುತ್ತಾರೆ. ಅವರು ಸರ್ವಶಕ್ತನಾದ ಅಲ್ಲಾಹನೊಂದಿಗೆ ವಿಶೇಷ ಸಂಬಂಧವನ್ನು ಹೊಂದಿದ್ದರು. ಅವರು ಮಕ್ಕಳ ಶಿಕ್ಷಣದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು ಮತ್ತು ಯಾವಾಗಲೂ ಅಲ್ಲಾಹನ ಕಡೆಗೆ ನೋಡುತ್ತಿದ್ದರು. ಅವರು ಅನಾಥರ ಬಗ್ಗೆ ತುಂಬಾ ಕಾಳಜಿ ವಹಿಸಿದ್ದರು. ಅವರಿಗೆ ಬಾಲ್ಯದಿಂದಲೂ ಅಲ್ಲಾಹನಲ್ಲಿ ಅಚಲವಾದ ನಂಬಿಕೆ ಇತ್ತು. ಅವರಿಗೆ ಕ್ಯಾನ್ಸರ್ ಇತ್ತು. ಅವರು ರೋಗನಿರ್ಣಯಗೊಂಡಾಗ, ಅವರು ಅಲ್ಲಾಹನ ಸಂತೋಷದಿಂದ ತೃಪ್ತರಾಗಿದ್ದರು, ಬದಲಿಗೆ ಅವರು ನಮಗೆ ಹೇಳುತ್ತಿದ್ದರು ನೀವೆಲ್ಲರು ಬಲವಾಗಿರಬೇಕು ಮತ್ತು ಅಲ್ಲಾನಲ್ಲಿ ನಿಮ್ಮ ನಂಬಿಕೆ ದೃಢವಾಗಿರಬೇಕು. ಜೀವನ ಮತ್ತು ಸಾವು ದೊಡ್ಡ ವಿಷಯವಲ್ಲ ಎಂದು ನಿಮ್ಮ ವೈದ್ಯರಿಗೆ ಹೇಳುತ್ತಿದ್ದರು, ಆದರೆ ನಿಜವಾದ ವಿಷಯವೆಂದರೆ ಒಬ್ಬ ವ್ಯಕ್ತಿಯು ತನ್ನ ಜೀವನವನ್ನು ಎಲ್ಲರೂ ಸಂತೋಷವಾಗಿರುವಂತೆ ಮತ್ತು ಅವನು ತನ್ನ ಕಾರ್ಯಗಳಿಂದ ತೃಪ್ತನಾಗುವ ರೀತಿಯಲ್ಲಿ ಬದುಕಬೇಕು. ಅಲ್ಲಾಹನು ಅವರ ಶ್ರೇಣಿಯನ್ನು ಹೆಚ್ಚಿಸಲಿ.

ನಾನು ಉಲ್ಲೇಖಿಸಲಿರುವ ಎರಡನೆಯ ಜನಾಝುವು ಗೌರವಾನ್ವಿತ ಚೌಧರಿ ಲತೀಫ್ ಅಹ್ಮದ್ ಜಮ್ಮತ್ ಸಾಹಿಬ್ ಕೆಲವು ದಿನಗಳ ಮುಂಚೆ 79 ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದೀಯತ್ ಅವರ ಅಜ್ಜ ಹಝ್ರತ್ ಚೌಧರಿ ಮುಹಮ್ಮದ್ ದಿನ್ ಸಾಹಿಬ್(ರ) ವಾಸಿಲ್ ಬಾಕಿ ನಾವಿಸ್ ಅವರಿಂದ ಬಂದಿದೆ, ಅವರ ಹೆಸರು ಅಂಜಾಮೆ ಆಥಮ್ ರೂಹಾನಿ ಖಝಾಇನ್ ಸಂಪುಟ-11, ಪುಟ-325ರಲ್ಲಿ ಮುನ್ನೂರ ಹದಿಮೂರು ಸಹಾಬರವರ ಪಟ್ಟಿಯಲ್ಲಿ ಮೂರನೇಯ ಹೆಸರು ಮಿಯಾನ್ ಮುಹಮ್ಮದ್ ದಿನ್ ಪಟ್ವಾರಿ ಬಿಲಾನಿ ಜಿಲ್ಲ ಗುಜ್ರಾತ್ ಎಂದು ಬರೆಯಲಾಗಿದೆ. ಚೌಧರಿ ಲತೀಫ್ ಜಮ್ಮತ್ ಸಾಹಿಬ್ ಅವರು 1966 ರಲ್ಲಿ ಲಾಹೋರ್ ಪಂಜಾಬ್ ವಿಶ್ವವಿದ್ಯಾಲಯದಿಂದ MSc ಗಣಿತಶಾಸ್ತ್ರ ಪದವಿಯನ್ನು ಪಡೆದರು. ಶಿಕ್ಷಣ ಇಲಾಖೆಗೆ ಸೇರಿದರು. 1966 ರಿಂದ 1968 ರವರೆಗೆ, ಅವರು ರಬ್ವಾದಲ್ಲಿನ ಶಿಕ್ಷಣ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಅಂತೆಯೇ, 1968 ರಿಂದ 1994 ರವರೆಗೆ, ಅವರು ಹೆಚ್ಚು ಕಡಿಮೆ ಇಪ್ಪತ್ತಾರು ವರ್ಷಗಳ ಕಾಲ ಸೆರಾಲಿಯೋನ್‌ನಲ್ಲಿ ಬೋಧನಾ ವಿಭಾಗದಲ್ಲಿ ಶಿಕ್ಷಕರಾಗಿ ಮತ್ತು ಪ್ರಾಂಶುಪಾಲರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರು. ಅವರು ವಾಖಿಫೆ ಝಿಂದಗಿ ಆಗಿದ್ದರು. ಆಫ್ರಿಕಾದಿಂದ ಹಿಂದಿರುಗಿದ ನಂತರ, ಅವರು ಸುಮಾರು 5 ವರ್ಷ ನಾಯೆಬ್ ನಕೀಲುಲ್ ಮಾಲ್ ಸಾನಿ ಮತ್ತು ಏಳು ವರ್ಷ ನಾಯಿಬ್ ವಕೀಲುಲ್ ಮಾಲ್ ಸಆಲಿಸ್ ಆಗಿ ಸೇವೆ ಸಲ್ಲಿಸಿದರು. ನಾನು ಹೇಳಿದಂತೆ ಸೆರಾಲಿಯೋನ್‌ನ ಜಮಾಅತ್ತಿನ ಶಾಲೆಯಲ್ಲಿ ಬೋಧನಾ ಕರ್ತವ್ಯಗಳನ್ನು ನಿರ್ವಹಿಸಿದರು. ಮತ್ತು 1971 ರಲ್ಲಿ, ಅವರು ಔಪಚಾರಿಕವಾಗಿ ತಮ್ಮ ಜೀವನವನ್ನು ಸಮರ್ಪಿಸಿದರು. ಜನವರಿ 1, 2007 ರಂದು, ಅವರು ವಕೀಲುಲ್ ಮಾಲ್ ಸಆಲಿಸ್ ಆಗಿ ನೇಮಕಗೊಂಡರು. ಹೀಗಾಗಿ, ಅವರ ಒಟ್ಟು ಸೇವಾ ಅವಧಿ ಅರ್ಧ ಶತಮಾನಕ್ಕೂ ಹೆಚ್ಚಾಗಿದೆ. ಅವರ ಪತ್ನಿ ರಶೀದ ಲತೀಫ್ ಸಾಹಿಬ ಹೇಳುತ್ತಾರೆ ನನ್ನ ಪತಿ ಸೆರಾಲಿಯೋನ್‌ನಲ್ಲಿದ್ದು, ನಾನು ಮದುವೆಯಾದ ನಂತರ ಅಲ್ಲಿಗೆ ಹೋಗಿದ್ದೆ, ಹಾಗಾಗಿ ನಾನು ಅಲ್ಲಿಗೆ ಹೋದಾಗ, ವಾಖಿಫೆ ಝಿಂದಗಿಯಾಗಿ ಇಲ್ಲಿ ಏಷ್ಯಾದ ವಸ್ತುಗಳನ್ನು ಖರೀದಿಸಿ ತಿನ್ನಲು ಕಷ್ಟ ಎಂದು ಸಲಹೆ ನೀಡಿದರು. ವಾಖಿಫೆ ಝಿಂದಗಿ ಮತ್ತು ಅವನ ಪತ್ನಿಯನ್ನು ಸ್ಥಳೀಯ ಆಹಾರವನ್ನು ತಿನ್ನಬೇಕು. ಆದ್ದರಿಂದ ನೀವು ಸ್ಥಳೀಯ ಆಹಾರವನ್ನು ಬೇಯಿಸಲು ಕಲಿತುಕೊಳ್ಳಿ ಅದು ನಂತರ ನಮಗೆ ಬಹಳ ಸಹಾಯವಾಯಿತು. ಅವರು ತುಂಬಾ ಸರಳ ಮನಸ್ಸಿನವರಾಗಿದ್ದರು. ಅವರು ಬಹಳ ಪರಿಗಣಿತರಾಗಿದ್ದರು. ಅವರ ಸಹೋದ್ಯೋಗಿಗಳು ಸಹ ಅವರ ದಯೆಯ ಬಗ್ಗೆ ಹೆಚ್ಚು ಮಾತನಾಡುತ್ತಾರೆ. ಎಲ್ಲರೂ ಅವರನ್ನು ಮೆಚ್ಚುತ್ತಾರೆ. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ, ಅವರ ಶ್ರೇಣಿಯನ್ನು ಹೆಚ್ಚಿಸಲಿ ಮತ್ತು ಅವರ ಕುಟುಂಬಗಳಿಗೆ ತಾಳ್ಮೆಯನ್ನು ನೀಡಲಿ. ಒಂದು ಮಗು ತನ್ನ ಬಾಲ್ಯದಲ್ಲಿ ಮರಣ ಹೊಂದಿತು. ಅವರಿಗೆ ಒಬ್ಬ ಮಗ ಮತ್ತು ಮಗಳು ಇದ್ದಾರೆ. ಅವರೂ ತಮ್ಮ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ.

ಮೂರನೆಯ ಉಲ್ಲೇಖವೆಂದರೆ ಮುಷ್ತಾಕ್ ಅಹ್ಮದ್ ಆಲಂ ಸಾಹಿಬ್ ಇಬ್ನ್ ಮಕ್ರಮ್ ಮುಹಮ್ಮದ್ ಆಲಂ ಸಾಹಿಬ್ ಮಿರ್ಪುರ್ ಆಜಾದ್ ಕಾಶ್ಮೀರದ್ದಾಗಿದೆ. ಅವರು 19 ಜುಲೈ 2022 ರಂದು ಅರವತ್ತು ವರ್ಷ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಅವರ ಪತ್ನಿ ಅಜ್ಮತ್ ಬೀಬಿಯಲ್ಲದೆ, ಅವರು ಆರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೂವರು ಪುತ್ರರು, ಒಬ್ಬ ಅಳಿಯ ಹಾಫೀಜ್-ಇ-ಖುರ್ಆನ್ ಆಗಿದ್ದಾರೆ. ಮೂವರು ಪುತ್ರರು ಮುರಬ್ಬಿಯಾಗಿದ್ದಾರೆ. ಅವರಲ್ಲಿ ಒಬ್ಬರು ಪಶ್ಚಿಮ ಆಫ್ರಿಕಾದ ಸೆನೆಗಲ್‌ನಲ್ಲಿರುವ ಹಾಫೀಜ್ ಮುಸವ್ವಿರ್ ಅಹ್ಮದ್ ಮುಝುಮ್ಮಿಲ್ ಮತ್ತು ಇನ್ನೊಬ್ಬ ಮಗ ಹಾಫೀಜ್ ಅಖ್ಲಾಕ್ ಅಹ್ಮದ್ ಆಗಿದ್ದಾರೆ. ಮೂರನೆಯ ಮಗ ಅಬ್ದುಲ್ ಖಾಲಿಕ್ ಅವರು ಪುರಾತತ್ವ ಶಾಸ್ತ್ರದಲ್ಲಿ ಪರಿಣತಿ ಹೊಂದಿದ್ದಾರೆ. ಅಲ್ಲಾಹನು ಅವರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ ಮತ್ತು ದಿವಂಗತರಿಗೆ ಕರುಣೆಯಿಂದ ವರ್ತಿಸಲಿ. ನಾನು ಹೇಳಿದಂತೆ, ನಮಾಝ್‌ನ ನಂತರ, ನಾನು ನಮಾಝೆ ಜನಾಝ ಗಾಯಿಬ್ ನಿರ್ವಹಿಸುತ್ತೇನೆ.

*********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪ್ರಸ್ತುತಪಡಿಸಿದ್ದರು. ಅವರ ಈ ಮಾತುಗಳಿಂದ ದೇವಭಯವಿದ್ದವರು ಯಾರಾದರೂ ಈ ಮೌಲ್ವಿಗಳು ಯಾವ ಮಟ್ಟಕ್ಕೆ ತಲುಪಿದ್ದಾರೆ ಎಂಬುದನ್ನು ಅರಿಯಬಹುದು. ಅವರು ದ್ವೇಷ ಭಾವನೆಯಿಂದಾಗಿ ಪ್ರವಾದಿತ್ವ ಆಧಾರವನ್ನು ಮತ್ತು ಪ್ರವಾದಿಗಳಿಗೆ ಗುರುತಿಸಬೇಕಾದ ದೃಷ್ಟಾಂತಗಳನ್ನು ಲೆಕ್ಕಿಸುವುದಿಲ್ಲ. ಅವರ ಎಲ್ಲಾ ಅಪಾದನೆಗಳು ಸುಳ್ಳಿನಿಂದ ಕೂಡಿವೆ. ಮತ್ತು ಶೈತಾನನ ಯೋಜನೆ ಆಗಿದೆ. ಅವರು ಸತ್ಯವಾದಿಗಳಾಗಿದ್ದರೆ ಖಾದಿಯಾನಿಗೆ ಬಂದು ಯಾವ ಭವಿಷ್ಯವಾಣಿ ಸುಳ್ಳಾಗಿದೆ ಎಂಬುದನ್ನು ಸಾಬೀತು ಮಾಡಿ ತೋರಿಸಲಿ. ಆಗ ಪ್ರತಿಯೊಂದು ಭವಿಷ್ಯವಾಣಿಗೆ ಒಂದು ನೂರು ರೂಪಾಯಿಯಂತೆ ಬಹುಮಾನ ನೀಡುವೆನು ಹೋಗುವ ಬರುವ ನೂರು ರೂಪಾಯಿಯಂತೆ ಬಹುಮಾನ ನೀಡುವೆನು. ಹೋಗುವ ಬರುವ ಖರ್ಚು ಬೇರೆ ಆಗಿರುವುದು. ಆದರೆ ಈ ತನಿಖೆಯ ವೇಳೆ ಪ್ರವಾದಿತ್ವ ಆಧಾರವನ್ನು ಸತ್ಯ ಹಾಗೂ ಮಿಥ್ಯಕ್ಕೆ ಮಾನದಂಡವಾಗಿ ಮಾಡಲಿ. ನಾನು ದಿಟವಾಗಿ ಹೇಳುವೆನು. ನನ್ನ ಪವಾಡಗಳು ಮತ್ತು ಭವಿಷ್ಯವಾಣಿಗಳು ಅವರ ದೃಷ್ಟಿಯಲ್ಲಿ ಸರಿ ಅಲ್ಲ ಎಂದಾದರೆ ಅವರಿಗೆ ಎಲ್ಲ ಪ್ರವಾದಿಗಳನ್ನು ಧಿಕ್ಕರಿಸಬೇಕಾದೀತು. ಕೊನೆಯಲ್ಲಿ ಅವಿಶ್ವಾಸದ ಮೇಲೆ ಅವರ ಮರಣವಾಗುವುದು.

**ನಾವು ಸನಾವುಲ್ಲಾ ಅವರಿಗೆ ಅಲ್ಲಾಹನ ಮೇಲೆ ಆಣೆ ಮಾಡಿಸಿ ಹೇಳುತ್ತೇವೆ. ಅವರು ತನಿಖೆ ಮಾಡಲು ಖಾದಿಯಾನಿಗೆ ಬರಲಿ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಹಾಗೆ ಬುದ್ಧಿಹೀನ ಈ ಜನರು ಕೆಲ ಭವಿಷ್ಯವಾಣಿಗಳನ್ನು ಸುಳ್ಳಾಗಿರುವುದೆಂದು ತಮ್ಮದೇ ಭಾವನೆಯಿಂದ ನಿರ್ಧರಿಸಿಕೊಂಡು ಹೇಳುತ್ತಾರೆ. ಕೆಲ ಭವಿಷ್ಯವಾಣಿಗಳು ಸುಳ್ಳಾಗಿರುವಾಗ ಅಥವಾ ತಪ್ಪು ಗ್ರಹಿಕೆಯಾಗಿರುವಾಗ ವಾಗ್ದತ್ತ ಮಸೀಹರಾಗುವ ದಾವೆಯ ಮೇಲೆ ಹೇಗೆ ಭರವಸೆ ಮಾಡಲಾಗುತ್ತದೆ? ಅದು ಸಹ ತಪ್ಪಾಗಿರಬಹುದು. ಅದರ ಪ್ರಥಮವಾಗಿ ನೀಡುವ ಉತ್ತರ ಎಂದರೆ- ಲಾನತುಲ್ಲಾಹಿ ಅಲಲ್ ಕಾಝಿಬೀನ್, ಮೌಲ್ವಿ ಸನಾವುಲ್ಲಾ ಮುದ್ ಗ್ರಾಮದಲ್ಲಿ ಚರ್ಚೆಯ ವೇಳೆ ಅದೇ ಹೇಳಿದ್ದರು. ಎಲ್ಲ ಭವಿಷ್ಯವಾಣಿಗಳು ಸುಳ್ಳಾಗಿವೆ ಎಂದು. ಆದುದರಿಂದ ನಾವು ಅವರನ್ನು ಆಹ್ವಾನಿಸುತ್ತೇವೆ ಮತ್ತು ಅಲ್ಲಾಹನ ಮೇಲೆ ಆಣೆ ಮಾಡಿಸಿ ಅವರನ್ನು

ತನಿಖೆಗಾಗಿ ಖಾದಿಯಾನಿಗೆ ಬರಲು ಹೇಳುತ್ತೇವೆ. ಬಂದು ಅವರು ಎಲ್ಲ ಭವಿಷ್ಯವಾಣಿಗಳನ್ನು ಪರೀಕ್ಷಿಸಲಿ. ನಾನು ಆಣೆ ಮಾಡಿ ವಾಗ್ದಾನ ಮಾಡುವೆ. ಎಲ್ಲ ಆ ಭವಿಷ್ಯವಾಣಿ ಅದು ಪ್ರವಾದಿತ್ವ ಆಧಾರದಲ್ಲಿ ಸುಳ್ಳು ಎಂದು ಸಾಬೀತಾಗಬೇಕು. ಆಗ ಅವರಿಗೆ ಒಂದೊಂದು ನೂರು ರೂಪಾಯಿಗಳು ಬಹುಮಾನ ನೀಡುವೆನು. ಇಲ್ಲವಾದ್ದಲ್ಲಿ ಒಂದು ವಿಶೇಷ ರೀತಿಯ ಶಾಪದ ಉಡುಗೊರೆ ಅವರ ಕೊರಳಿಗೆ ಬೀಳುವುವು. ನಾವು ಬರುವ ಹೋಗುವ ಖರ್ಚು ಸಹ ಕೊಡುವೆವು. ನಾಳೆ ಅವರ ಭವಿಷ್ಯವಾಣಿಗಳನ್ನು ಪರೀಕ್ಷಿಸಬೇಕು. ಏಕೆಂದರೆ ಮುಂದೆ ಯಾವುದೇ ರೀತಿಯ ಜಗಳ ಬಾಕಿಯಾಗಿ ಉಳಿಯಬಾರದು. ಅದೇ ಶರತ್ತಿನ ಮೇಲೆ ರೂಪಾಯಿ ದೊರಕುವುದು. ಸಾಕ್ಷ್ಯಗಳು ನಾವು ಒದಗಿಸುವೆವು.

**ಸನಾವುಲ್ಲಾ ಭವಿಷ್ಯವಾಣಿಗಳನ್ನು ಸುಳ್ಳು ಎಂದು ಸಾಬೀತುಗೊಳಿಸಿದರೆ ಅವರಿಗೆ ಬೀದಿ ಬೀದಿ ಅಲೆದಾಡುವುದರಿಂದ ಮುಕ್ತಿ ದೊರೆಯುವುದು. ನುಝೂಲುಲ್ ಮಸೀಹನ ಒಂದು ನೂರು ಐವತ್ತು ಭವಿಷ್ಯವಾಣಿಗಳನ್ನು ಸುಳ್ಳೆಂದು ಸಾಬೀತುಪಡಿಸಿದರೆ, ಹದಿನೈದು ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಹೋಗಲಿ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೆನಪಿರಲಿ ನುಝೂಲುಲ್ ಮಸೀಹ್ ಪತ್ರಿಕೆಯಲ್ಲಿ ನಾನು **ಒಂದು ನೂರು ಐವತ್ತು** ಬವಿಷ್ಯವಾಣಿಗಳನ್ನು ಬರೆದಿದ್ದೇನೆ. ಅದು ಸುಳ್ಳೆಂದಾದರೆ ಹದಿನೈದು ಸಾವಿರ ರೂಪಾಯಿಗಳು ಮೌಲ್ವಿ ಸನಾವುಲ್ಲಾ ಸಾಹಿಬರು ಪಡೆದುಕೊಂಡು ಹೋಗುವರು. ಮತ್ತು ಬೀದಿ ಬೀದಿ ಅಲೆದಾಡುವುದರಿಂದ ಮುಕ್ತಿ ದೊರೆಯುವುದು. ಅಲ್ಲದೇ ನಾವು ಇನ್ನಷ್ಟು ಭವಿಷ್ಯವಾಣಿಗಳು ಸಾಕ್ಷ್ಯಗಳೊಂದಿಗೆ ಅವರ ಮುಂದೆ ಪ್ರಸ್ತುತಪಡಿಸುವೆವು ಮತ್ತು ಅದೆ ವಾಗ್ದಾನ ಪ್ರತಿಯೊಂದು ಭವಿಷ್ಯವಾಣಿಗೆ ಒಂದು ನೂರು ರೂಪಾಯಿ ಕೊಡುವೆವು. ಈ ಸಮಯ ಒಂದು ಲಕ್ಷಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ನನ್ನ ಜಮಾಅತ್ ಇದೆ. ಅಂದಹಾಗೆ ನಾನು ಮೌಲ್ವಿ ಸಾಹಿಬರಿಗೆ ಒಂದೊಂದು ರೂಪಾಯಿಯೇ ಸರಿ ತನ್ನ ಶಿಷ್ಯಂದರಿಂದ ತೆಗೆದುಕೊಂಡರೆ ಒಂದು ಲಕ್ಷ ರೂಪಾಯಿಗಳಾಗುವುದು. ಅದೆಲ್ಲ ಅವರಿಗೆ ಒಪ್ಪಿಸುವೆವು. ಯಾವ ಸ್ಥಿತಿಯಲ್ಲಿ ಅವರು ಪೈಸೆ ಪೈಸೆಗೋಸ್ಕರ ಅವರು ಬೀದಿ ಬೀದಿಯಲ್ಲಿ ತಿರುಗಾಡುತ್ತಾರೆ, ಅಲ್ಲಾಹನ ಶಾಪಕ್ಕೆ ಗುರಿಯಾಗುತ್ತಾರೆ, ಶವವಸ್ತ್ರ ಅಥವಾ ಉಪದೇಶಗಳ ಹಣದ ಮೇಲೆ ಜೀವನ ಕಳೆಯುತ್ತಾರೆ, ಅಂಥವರಿಗೆ ಒಂದು ಲಕ್ಷ ದೊರೆಯುವುದೆಂದರೆ ಅದು ಅವರಿಗೆ ಒಂದು ಸ್ವರ್ಗವೇ ಸರಿ. ಆದರೆ ನನ್ನ ಈ ವಿವರಣೆಯ ಕಡೆ ಅವರು ಗಮನಹರಿಸದಿದ್ದರೆ ಮತ್ತು ಈ ತನಿಖೆಯಲ್ಲಿ ಪ್ರಸ್ತುತಪಡಿಸಿದ ಶರತ್ತುಗಳನ್ನು ಪಾಲಿಸದಿದ್ದರೆ, ಅದರಲ್ಲಿ ಸತ್ಯ ಹಾಗೂ ಮಿಥ್ಯ ಎರಡಕ್ಕೂ ಸಾಕ್ಷ್ಯಗಳನ್ನು ಒದಗಿಸುವ ಶರತ್ತಿದೆ. ಖಾದಿಯಾನಿಗೆ ಬಾರದಿದ್ದರೆ ಆಗ ಅವರ ಮೇಲೆ ಶಾಪವಿದೆ. ಮುದ್ ಗ್ರಾಮದಲ್ಲಿ ಅವರು ಯಾವ ರೀತಿಯ ಟೊಳ್ಳು ಮಾತುಗಳನ್ನು ಆಡಿದರೆ, ನಾಚಿಕೆಯಿಲ್ಲದೆ ಸುಳ್ಳನ್ನು ಹೇಳಿದ್ದಾರೆ. ಅಲ್ಲಾಹನು ಹೇಳಿದನು. "ಲಾ ತಖ್ಫು ಮಾ ಲೈಸ ಲಕ ಬಿಹಿ ಇಲ್ಮ್" ಆದರೆ ಅವರು ಏನು ತಿಳಿಯದೇ ತನಿಖೆ ಮಾಡದೇ ಸಾರ್ವಜನಿಕರಲ್ಲಿ ಸುಳ್ಳು ಹೇಳಿದರು. ಇದೇ ಅವರ ಪ್ರಮಾಣೀಕತೆಯೇ ವಿನಾಕಾರಣ ಬೊಗಳುವವನು ನಾಯಿಗಿಂತ ಕೀಳು, ಮತ್ತು ನಾಚಿಕೆಯಿಲ್ಲದೆ ಕಳೆದ ಆ ಜೀವನವು ಶಾಪಗ್ರಸ್ತ ಜೀವನವಾಗಿದೆ. (ಅದೇ ಪುಟ 131).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಹಝ್ರತ್ ಮಸೀಹ್ ಮೌಊದ್ (ಅ) ರವರ ಇನ್ನೊಂದು ಬಹುಮಾನದ ಪಂಥ್ವನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಗತ್ಯವನ್ನು ನೀವು ಅನುಭವಿಸಲಿಲ್ಲ.

ಅದರ ನಂತರ, ಈ ದೈವವಾಣಿಯ (ವಹಿ) ಅನುಗ್ರಹಗಳನ್ನು ಸೂಚಿಸುವ ಸಲುವಾಗಿ ಅಲ್ಲಾಹನು ಹೇಳುತ್ತಾನೆ: ಓ ಮುಹಮ್ಮದ್(ಸ)! ನಾವು ನಿಮ್ಮ ಮೇಲೆ ಒಂದು ಗ್ರಂಥವನ್ನು ಅವತರಿಸಿದ್ದೇವೆ, ಅದರಲ್ಲಿ ಪ್ರತಿಯೊಂದು ಆಧ್ಯಾತ್ಮಿಕ ಅಗತ್ಯತೆಗಳ ವ್ಯಾಖ್ಯಾನವಿದೆ ಮತ್ತು ಅದರಲ್ಲಿ ಕರುಣೆ ಹಾಗೂ ಮಾರ್ಗದರ್ಶನದ ಸಾಧನಗಳಿವೆ. ಅಂದರೆ, ನಿಮ್ಮ ಮತ್ತು ನಿಮ್ಮ ಸಮೂದಾಯದ ಜನರ ನಡುವಿನ ವ್ಯತ್ಯಾಸವು ಇದರಲ್ಲಿದೆ.

ಇಲ್ಲಿ, **ಕುಲ್ಲಿ ಶೈಯಿನ್** ನಿಂದ ಪ್ರಪಂಚದ ಎಲ್ಲಾ ವಸ್ತುಗಳು ಎಂದರ್ಥವಲ್ಲ, ಬದಲಿಗೆ ಈ ಗ್ರಂಥಕ್ಕೆ ಸಂಬಂಧಿಸಿದ ವಿಷಯಗಳಾಗಿವೆ. ಒಬ್ಬ ಶಿಕ್ಷಕ ತನ್ನ ವಿದ್ಯಾರ್ಥಿಗೆ ಎಲ್ಲಾ ಪುಸ್ತಕಗಳನ್ನು ತೆಗೆದುಕೊಳ್ಳುವಂತೆ ಹೇಳಿದರೆ, ಅವನು ಗ್ರಂಥಾಲಯದಲ್ಲಿರುವ ಎಲ್ಲಾ ಪುಸ್ತಕಗಳನ್ನು ತೆಗೆದುಕೊಳ್ಳಬೇಕು ಎಂದು ಅರ್ಥವಲ್ಲ. ಬದಲಿಗೆ, ತಮ್ಮ ಪುಸ್ತಕಗಳನ್ನು ಮಾತ್ರ ತೆಗೆದುಕೊಳಬೇಕೆಂದು ಅರ್ಥವಾಗಿರುತ್ತದೆ. ಅದೇ ರೀತಿ ಇಲ್ಲಿ **ಕುಲ್ಲಿ** ಎಂದರೆ ಅಧ್ಯಾತ್ಮಿಕ ಅಭಿವೃದ್ಧಿಗೆ ಅಗತ್ಯವಾದ ವಿಷಯಗಳು ಎಂದಾಗಿದೆ. ಕೆಲವು ವಿಷಯಗಳ ವ್ಯಾಖ್ಯಾನವು ಹದೀಸ್‌ಗಳಲ್ಲಿ ಮಾತ್ರ ಕಂಡುಬರುತ್ತದೆ ಎಂದು ಯಾರಾದರೂ ಹೇಳಿದರೆ, ಅದಕ್ಕೆ ಉತ್ತರ, ಈ ಎಲ್ಲಾ ತತ್ವಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾಗಿದೆ. ಹದೀಸ್‌ಗಳಲ್ಲಿ ವಿವರಿಸಲಾದ ವ್ಯಾಖ್ಯಾನಗಳು ಪವಿತ್ರ ಖುರ್‌ಆನ್‌ನ ವ್ಯಾಖ್ಯಾನಗಳಾಗಿವೆ. ಪ್ರವಾದಿ ಮುಹಮ್ಮದ್(ಸ) ಅವರಗೆ ಪವಿತ್ರ ಖುರ್‌ಆನ್‌ನ ತಿಳುವಳಿಕೆ ಅತೀ ಹೆಚ್ಚಾಗಿ ಅಲ್ಲಾಹನು ನೀಡಿದ್ದನು. ಅವರು ಪವಿತ್ರ ಖುರ್‌ಆನ್‌ನಿಂದ ಪಡೆಯುವ ಅರ್ಥಗಳನ್ನು ನಾವು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಅವರು ಪವಿತ್ರ ಖುರ್‌ಆನ್‌ನ ಕೆಲವು ಅರ್ಥಗಳನ್ನು ವಿವರಿಸಿದ್ದರೆ, ಪವಿತ್ರ ಖುರ್‌ಆನ್ ಅಪೂರ್ಣವಾಗಿದೆ ಎಂದು ಅರ್ಥವಲ್ಲ, ಆದರೆ ಇದರ ಅರ್ಥವೇನೆಂದರೆ ಪ್ರವಾದಿ ಮುಹಮ್ಮದ್(ಸ)ರವರು ಈ ವಿಷಯಗಳನ್ನು ಪವಿತ್ರ ಖುರ್‌ಆನ್‌ನ ಬಗ್ಗೆ, ತಮ್ಮ ಪರಿಪೂರ್ಣ ತಿಳುವಳಿಕೆಯಿಂದ ನಿರ್ಣಯಿಸಿದ್ದಾರೆ, ನಮ್ಮ ಮನಸ್ಸು ಈ ಸೂಕ್ಷ್ಮತೆಯನ್ನು ಗುರುತಿಸಲು ಸಾಧ್ಯವಾಗಲಿಲ್ಲ.

ಪವಿತ್ರ ಖುರ್‌ಆನ್‌ನ ಜನರು ಎಂದು ಕರೆಯಲ್ಪಡುವವರು ಈ ವಿಷಯದಲ್ಲಿ ಗಂಭೀರ ತಪ್ಪು ಮಾಡಿದ್ದಾರೆ. ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ಸ) ರವರು ನಮ್ಮಂತೆಯೇ ಒಬ್ಬ ವ್ಯಕ್ತಿಯಾಗಿದ್ದಾರೆ ಆದ್ದರಿಂದ ಅವರ ಮಾತುಗಳನ್ನು ನಾವು ಏಕೆ ನಂಬಬೇಕು? ಪವಿತ್ರ ಖುರ್‌ಆನ್‌ನಲ್ಲಿರುವ ವಿಷಯಗಳನ್ನು ನಾವು ನಂಬುತ್ತೇವೆ ಎಂದು ಅವರು ಹೇಳುತ್ತಾರೆ. ಆದರೆ, ಪ್ರವಾದಿಯವರ ಮಾತುಗಳನ್ನು ನಂಬುವ ಪ್ರಶ್ನೆಯಲ್ಲ, ಆದರೆ ಅವರು ಪವಿತ್ರ ಖುರ್‌ಆನ್ ಅನ್ನು ನಮಗಿಂತ ಹೆಚ್ಚು ಅರ್ಥಮಾಡಿಕೊಂಡಿದ್ದಾರೆ ಎಂಬುದು ಪ್ರಶ್ನೆಯಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ವಮಾ ಯನ್‌ತಿಖಿಯ ಅನಿಲ್ ಹವಾ ಇನ್‌ಹುವ ಇಲ್ಲಾ ವಹ್ಯುಯೂಹಾ–** ಅಂದರೆ ಪ್ರವಾದಿ(ಸ)ರವರು ಪವಿತ್ರ ಖುರ್‌ಆನ್ ಬಗ್ಗೆ ಏನು ಹೇಳುತ್ತಾರೊ ಅದು ದೈವವಾಣಿಯ ಪ್ರಕಾರ ಹೇಳುತ್ತಾರೆ. ಅದರಲ್ಲಿ ಯಾವುದೇ ತಪ್ಪು ಇರುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನಿಂದ ರಕ್ಷಿಸಲ್ಪಟ್ಟ ಇತರರ ತಿಳುವಳಿಕೆಗಿಂತ ಖುರ್‌ಆನ್‌ನ ತಿಳುವಳಿಕೆಗೆ ಆದ್ಯತೆ ನೀಡಲಾಗುತ್ತದೆ. ಈ ಹದೀಸ್ ಅಧಿಕೃತವಲ್ಲ ಎಂದು ವಾದಿಸಲು ನಮಗೆ ಹಕ್ಕಿದೆ, ಈ ಹದೀಸ್ ಅಧಿಕೃತವಾಗಿದೆ ಆದರೆ ಪ್ರವಾದಿ(ಸ) ತಪ್ಪು ಮಾಡಿದ್ದಾರೆ ಎಂದು ನಾವು ಹೇಳಲು ನಮಗೆ ಸಾಧ್ಯವಿಲ್ಲ. **ನೌಝುಬಿಲ್ಲಾಹ್ ಮಿನ್ ಝಾಲಿಕ್**. ಪವಿತ್ರ ಖುರ್‌ಆನ್‌ನ ಬೋಧನೆಗೆ ಸಂಬಂಧಿಸಿದಂತೆ ಪ್ರವಾದಿ(ಸ)ರವರ ವ್ಯಾಖ್ಯಾನವನ್ನು ನಾವು ಅರ್ಥಮಾಡಿಕೊಳ್ಳದಿದ್ದರೂ ಸಹ, ಪ್ರವಾದಿ(ಸ) ಅವರ ವ್ಯಾಖ್ಯಾನವನ್ನು ನಾವು ಸರಿಯಾಗಿ ಸ್ವೀಕರಿಸಬೇಕಾಗುತ್ತದೆ. ಆದರೆ ಶರತ್ತು ಏನೆಂದರೆ ಅದರಲ್ಲಿ ಉಲ್ಲೇಖಿಸಲಾದ ಹದೀಸ್ ಹದೀಸ್‌ನ ದೃಢೀಕರಣದ ತತ್ವವನ್ನು ಅನುಸರಿಸಬೇಕು.

ಇಲ್ಲಿ ಪವಿತ್ರ ಖುರ್‌ಆನ್‌ನ ನಾಲ್ಕು ಕಾರ್ಯಗಳನ್ನು ಉಲ್ಲೇಖಿಸಲಾಗಿದೆ. (1) **ತಿಬ್‌ಯಾನನ್ ಲಿಕುಲ್ಲಿ ಶೈಯಿನ್** ಅಂದರೆ ಆಧ್ಯಾತ್ಮಿಕತೆಗೆ ಅಗತ್ಯವಿರುವ ವಿಷಯಗಳ ವ್ಯಾಖ್ಯಾನ ಇದರಲ್ಲಿದೆ. (2) ಮಾರ್ಗದರ್ಶನವಿದೆ. (3) ಕರುಣೆ ಇದೆ (4) ಮೂಮಿನ್‌ಗಳಿಗೆ ಸುವಾರ್ತೆ ಇದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–218 ಪ್ರಕಟಿತ ಖಾದಿಯಾನ್ 2010)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ. **(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

***127 ನೇ ಜಲ್ಸಾ ಸಾಲಾನ ಖಾದಿಯಾನ್***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 15 September 2022, Issue No. 37

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್ನ ಪ್ರವಾಸ (ಸೆಪ್ಟೆಂಬರ್ 2014)

(ಬದರ್ ಸಂಚಿಕೆ 36ರ ಉಳಿದ ಭಾಗ)

ಐರ್ಲ್ಯಾಂಡ್‌ನಲ್ಲಿ ಜಮಾಅತಿನ ಮಿಷನ್ ಹೌಸ್ ವಿಧಿಬದ್ಧವಾಗಿ ಸ್ಥಾಪಿಸಿದ ನಂತರ ಆ ಸಮಯ ಜಮಾಅತಿನ ಜನರ ಒಟ್ಟು ಸಂಖ್ಯೆ ಕೇವಲ 16 ಆಗಿತ್ತು. ಇದೀಗ ಅಲ್ಲಾಹನ ಅನುಗ್ರಹದಿಂದ ಐರ್ಲ್ಯಾಂಡ್ ಜಮಾಅತಿನ ಜನರ ಸಂಖ್ಯೆ 354 ಆಗಿದೆ. ದೇಶದ ನಗರಗಳಾದ Limerick, Dubline, cork Drogheda, Athlone, Gateway & Pomtiose ನಲ್ಲಿ ಜಮಾಅತ್ ಬಾಂಧವರು ವಾಸಿಸುತ್ತಿದ್ದಾರೆ. ಇಲ್ಲಿಯ ಜಮಾಅತ್ ತುಂಬಾ ಸುವ್ಯವಸ್ಥಿತವಾಗಿದೆ. ದೃಢ ಮತ್ತು ಸಕ್ರಿಯವಾಗಿದೆ ಮತ್ತು ಸಾಂಪತ್ತಿಕ ತ್ಯಾಗದಲ್ಲಿ ಮುನ್ನಡೆ ಸಾಧಿಸಿದವರಾಗಿದ್ದಾರೆ. ಜಮಾಅತ್ 2010 ನೇ ವರ್ಷದಲ್ಲಿ ಡಬ್ಲಿನ್ ನಗರದಲ್ಲಿ ಎರಡೂ ಲಕ್ಷ ಎಂಭತ್ತು ಸಾವಿರ ಯೂರೋ ಮೊತ್ತದಿಂದ ಒಂದು ಕಟ್ಟಡ ಮಿಷನ್ ಹೌಸಿಗಾಗಿ ಖರೀದಿಸಿದರು. ಈ ಕಟ್ಟಡದ ಕೆಲಭಾಗ ನಮಾಝಿನ ಸಲುವಾಗಿ ಬಳಸಲಾಗುತ್ತದೆ. ಮತ್ತು ಅದರೊಂದಿಗೆ ಸೇರಿದ ಮನೆ ಬಾಡಿಗೆಯ ಮೇಲೆ ಪಡೆಯಲಾಗಿದೆ. ಅದು ಲಜ್ನ ಅವರ ನಮಾಝಿಗೋಸ್ಕರ ಮತ್ತು ಕುಸರಿ ಕೆಲಸಗಳಿಗೆ ಬಳಸಲಾಗುತ್ತದೆ.

ಹುಝೂರ್ ಅನ್ವರ್ (ಅಬಿಅ) ತಮ್ಮ ಹಿಂದಿನ ಪ್ರವಾಸದ ನಡುವೆ ಈ ಜಮಾಅತಿ ಈ ಸೆಂಟರಿನ ಹೆಸರು "ಬೈತುಲ್ ಅಹ್ಮದ್" ಎಂದು ಇಟ್ಟಿದ್ದರು.

ಇದೀಗ ಜಮಾಅತ್ ಐರ್ಲ್ಯಾಂಡ್ ಇನ್ನಷ್ಟು ಸಾಂಪತ್ತಿಕ ತ್ಯಾಗ ಪ್ರದರ್ಶಿಸುತ್ತ ಗಾಲ್ವೆಯಲ್ಲಿ ಜಮಾಅತಿನ ಪ್ರಥಮ ಮಸೀದಿ "ಮಸ್ಜಿದ್ ಮರ್‌ಯಮ್" ನಿರ್ಮಿಸುವ ಭಾಗ್ಯ ಪಡೆದಿದೆ. ಅಲ್ಹಮ್ದುಲಿಲ್ಲಾಹ್.

ಐರ್ಲ್ಯಾಂಡ್‌ನಲ್ಲಿ ಜಮಾಅತಿನ ಅಧೀಕೃತ ಸ್ಥಾಪನೆ 1986 ರಲ್ಲಿ ಆಯಿತು. ಮಿಷನ್ ಹೌಸ್, ಜಮಾಅತ್ ಸೆಂಟರ್‌ನ ಸ್ಥಾಪನೆ 1989 ರಲ್ಲಿ ಆಯಿತು. ಆದರೆ ಅದಕ್ಕಿಂತ ಮೊದಲು 1976 ರಲ್ಲಿ ಐರೀಷ್ ಮಹಿಳೆಯೊಬ್ಬರಿಗೆ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ಸಿಕ್ಕಿತು. ಆ ಮಹಿಳೆಯ ಹೆಸರು ಕೆಥೆಲಿನ್ ಎಂದಾಗಿತ್ತು. ಅವರು ಹಝ್ರತ್ ಮೌಲಾನ ಅಬ್ದುಲ್ ರಹೀಮ್ ದರ್ದ್ ಸಾಹಿಬ್ ರವರ ಪ್ರಚಾರದಿಂದ ಅಹ್ಮದಿ ಆದರು ಮತ್ತು ತಮ್ಮ 12ನೆ ವರ್ಷ ವಯಸ್ಸಿನಲ್ಲಿ ಎರಡನೆ ಖಲೀಫರಲ್ಲಿ ಬೈಅತ್ ಮಾಡಿದ್ದರು. ಕೆಲವು ಸಮಯ ಅವರು ಎರಡನೆ ಖಲೀಫರ ಮನೆಯಲ್ಲಿ ತಂಗಿದ್ದರು. ಹುಝೂರ್ ಅವರ ಹೆಸರನ್ನು "ಸೂಫಿಯಾ" ಎಂದಿಟ್ಟರು. ಅವರು ಪವಿತ್ರ ಖುರ್‌ಆನ್ ಹಝ್ರತ್ ಪೀರ್ ಮುಹಮ್ಮದ್ ಮಂಝೂರ್ ಸಾಹಿಬ್ ಅವರಿಂದ ಕಲಿತರು. ಅನಂತರ ಆ ಮಹಿಳೆಯ ವಿವಾಹ ಸಯ್ಯದ್ ಅಬ್ದುಲ್ ರಜಾಕ್ ಸಾಹಿಬ್ ಇಬ್ನು ಡಾ। ಸಯ್ಯದ್ ಅಬುಲ್ ಸತ್ತಾರ್ ಶಾ ಸಾಹಿಬ್ ದಿವಂಗತರ ಜೊತೆಯಾಯಿತು ನಂತರ ಅವರ ಹೆಸರು ಹನೀಫ್ ಬೇಗಂ ಆಯಿತು. ಅವರು ಹಝ್ರತ್ ಸಯ್ಯದಾ ಉಮ್ಮೇ ಸಾಹಿಬರ ಅತ್ತಿಗೆ ಆಗಿದ್ದರು. ಹನೀಫ್ ಬೇಗಂ ಸಾಹಿಬ ಹನ್ನೊಂದು ವರ್ಷದವರೆಗೆ ತನ್ನ ಗಂಡನ ಜೊತೆಯಲ್ಲಿ ಕೆನಡದಲ್ಲಿದ್ದರು. ಮತ್ತೆ ಒಂದು ದೀರ್ಘ ಅವಧಿಯವರೆಗೆ ಖಾದಿಯಾನಿಯಲ್ಲಿ ಕಳೆದರು. ಅನಂತರ ತನ್ನ ಗಂಡನ ಜೊತೆಯಲ್ಲಿಯೇ ಅಹ್ಮದಾಬಾದ್ ಸ್ಟೇಟ್ ಸಿಂದ್‌ಗೆ ಸ್ಥಳಾಂತರಗೊಂಡರು.

ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು ಅಹ್ಮದಾಬಾದ್ ಸಿಂಧ್ ರಾಜ್ಯಕ್ಕೆ ಯಾವಾಗಲೆಲ್ಲ ಆಗಮಿಸುತ್ತಿದ್ದರು. ಮುಂಜಾನೆಯ ಉಪಹಾರ ಅವರೊಂದಿಗೆಯೇ ಮಾಡುತ್ತಿದ್ದರು. ಅಲ್ಲದೇ ಹಿಂದಿರುವಾಗ ಸಂದೇಶ ನೀಡುತ್ತಿದ್ದರು. ಮುಂಜಾನೆ ಕ್ವೆಟ್ಟ ಟಾಬ್ಲಿ ನಿಲ್ದಾಣದಲ್ಲಿ ನಿಲ್ಲುವುದು ಅಲ್ಲಿ ಮುಂಜಾನೆಯ ಉಪಹಾರ ಪಡೆಯುವಂತಾಗಬೇಕು. ಅವರು ಬಿಸಿ ಬಿಸಿ ಉಪಹಾರ ತಯಾರು ಮಾಡಿ ರೈಲು ನಿಲ್ದಾಣಕ್ಕೆ ಕಳುಹಿಸಿ ಕೊಡುತ್ತಿದ್ದರು. ರೈಲು ತಲುಪುತ್ತಲೇ ಉಪಹಾರ ದೊರೆಯುತಿತ್ತು. ಹುಝೂರ್ ತುಂಬಾ ಸಂತೋಷಪಡುತ್ತಿದ್ದರು ಮತ್ತು ಧನ್ಯವಾದ ವ್ಯಕ್ತಪಡಿಸುತ್ತಿದ್ದರು.

ಅವರು ಅಹ್ಮದಾಬಾದ್ ರಾಜ್ಯದಲ್ಲಿ ವಾಸಿಸಿದ ನಡುವೆ ಟೈಫಾಯಿಡ್‌ನಿಂದ ಅಸ್ವಸ್ಥರಾದರು. ಮತ್ತು ಅಲ್ಲೆ ಅವರ ನಿಧನವಾಯಿತು. ಮತ್ತೆ ಅಲ್ಲೆ ದಫನ್ ಮಾಡಲಾಯಿತು.

ಕೆಥೋಲಿಕ್ ಆಗಿದ್ದ ಕಾರಣ ಇಲ್ಲಿ ಐರ್‌ಲ್ಯಾಂಡ್‌ನ ಜನರು ತುಂಬಾ ಸಂಭಾವಿತರಾಗಿದ್ದಾರೆ. ಐರ್‌ಲ್ಯಾಂಡ್‌ನಲ್ಲಿ ಕೆಥೇಲಿಝಂ Vatica city (ಅದು ಪೋಪರ ನಿವಾಸ ಆಗಿದೆ) ಕ್ರೈಸ್ತರ ಕೇಂದ್ರವಾಗಿದೆ ಕೆಥೋಲಿಕ್ ಕ್ರೈಸ್ತರು ಅಲ್ಲಿ ಹೆಚ್ಚಾಗಿದ್ದಾರೆ. ಆದರೂ ಅಲ್ಲಾಹನ ಅನುಗ್ರಹದಿಂದ ದಿವಂಗತ ಹನೀಫಾ ಬೇಗಂರಂತಹ ಕೆಲ ಪವಿತ್ರ ಆತ್ಮಗಳುಳ್ಳ ಆ ಐರಿಷ್ ಜನರು ಸಹ ಅಹ್ಮದಿಅತ್ತಿನ ಪ್ರಕಾಶದಿಂದ ಪ್ರಕಾಶಿತರಾದರು.

ಐರಿಷ್ ಸಮುದಾಯದಿಂದ ಇನ್ನೊಂದು ಬೈಅತ್ ಸಹ ಒಂದು ಮಹಿಳೆಯದ್ದೇ ಆಗಿತ್ತು. ಆ ಮಹಿಳೆಯ ಹೆಸರು Patnicia ಎಂದಾಗಿತ್ತು. ಅವರು 1965 ರಲ್ಲಿ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ಪಡೆದಿದ್ದರು. ಅವರ ವಿವಾಹ ಮಾರಿಶಸ್‌ನ ಓರ್ವ ಅಹ್ಮದಿ ಮಿತ್ರ ಅಬ್ದುಲ್ ಗ್ವನಿಯೊಂದಿಗಾಯಿತು.

1967 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ತೃತೀಯರು ಬ್ರಿಟಾನಿಯಾ ಪ್ರವಾಸದ ನಡುವೆ ಅವರನ್ನು ಭೇಟಿ ಮಾಡಿದಾಗ ಅವರ ಜೀವನದಲ್ಲಿ ಒಂದು ಪರಿವರ್ತನೆ ಉಂಟಾಯಿತು ಮತ್ತು ತನ್ನ ವಿಶ್ವಾಸ ಹಾಗೂ ನಿಷ್ಠೆಯಲ್ಲಿ ಎಷ್ಟೊಂದು ಪ್ರಗತಿ ಸಾಧಿಸಿದರೆಂದರೆ ಒಂದು ದೀರ್ಘ ಅವಧಿ ಮಾರಿಶಸ್ಸಿನ ಸದರ್ ಲಜ್ನ ಆಗಿದ್ದರು. ಅವರು ಅಬ್ದುಲ್ ಗನಿ! ಜಹಾಂಗೀರ್ ಸಾಹಿಬ್ ಇನ್‌ಚಾರ್ಜ್ ಫ್ರೆಂಚ್ ಡೆಸ್ಕ್ ಯು.ಕೆ ಯ ತಾಯಿಯಾಗಿದ್ದರು ಮತ್ತು ಮಸ್ಜಿದ್ ಮರಿಯಂನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಬರಲಿದ್ದರು. ಐರಿಶ್ ಸಮುದಾಯದಿಂದ ಅಹ್ಮದಿಯತ್ ಸ್ವೀಕರಿಸಿದವರಲ್ಲಿ ಓರ್ವ ಮಿತ್ರರಾದ ಮುಕರ್ರಮ್ ಇಬ್ರಾಹಿಂ ನೂನನ್ ಸಾಹಿಬ್ ಒಬ್ಬರಾಗಿದ್ದಾರೆ. ಅವರು ಆ ಸಮಯ ಐರ್‌ಲ್ಯಾಂಡ್‌ನಲ್ಲಿ ಸಂಘಟನೆಯ ಪ್ರಚಾರರಾಗಿದ್ದರು. ಬ್ರಿಟಾನಿಯಾದಲ್ಲೂ ಮುಬಲ್ಲಿಗರಾಗಿ ಕೆಲಸ ನಿರ್ವಹಿಸಿದರು. ಮತ್ತು ಮಜ್ಲಿಸ್ ಖುದ್ದಾಮುಲ್ ಗ್ರಿಗ್‌ಮರಿಂದ ಯು.ಕೆಯ ಅಧ್ಯಕ್ಷರು ಸಹ ಆಗಿದ್ದರು. ಅವರು 1991 ರಲ್ಲಿ ಬೈಅತ್ ಮಾಡುವ ಭಾಗ್ಯ ಪಡೆದಿದ್ದರು.

ಅಲ್ಲಾಹನ ಅನುಗ್ರಹದಿಂದ ಈ ಸಮಯ ಐರಿಶ್ ಅಹಮದಿಯರ ಸಂಖ್ಯೆ 10 ಕ್ಕಿಂತ ಹೆಚ್ಚಾಗಿವೆ. ಅವರೆಲ್ಲರೂ ನಿಷ್ಠೆ ಮತ್ತು ಸೇವೆಯಲ್ಲಿ ಮುಂದುವರೆದವರಾಗಿದ್ದಾರೆ.

ಈ ಸಮಯದಲ್ಲಿ ಕೆಲ ಐರಿಶ್ ಯುವಕರು ಸಂಪರ್ಕದಲ್ಲಿದ್ದಾರೆ ಮತ್ತು ಪ್ರಚಾರ ಒಳಗೊಂಡಿದ್ದಾರೆ. ಜಮಾಅತ್ತಿಗೆ ಸಮೀಪವಾಗುತ್ತಿದ್ದಾರೆ.

ಹುಝೂರ್ ಅನ್ವರ್(ಅಬಿಅ) ರ ಶುಭ ಹೆಜ್ಜೆಗಳು ಈ ಭೂಮಿಯ ಮೇಲೆ 2ನೇ ಬಾರಿಗೆ ಬರುವಂತಾಗಿದೆ. ಈಗ ಇನ್‌ಶಾಅಲ್ಲಾಹ್ ಈ ಭೂಮಿಯ ಮೇಲೆ ಯಶಸ್ಸುಗಳ ಮತ್ತು ವಿಜಯಗಳ ಬಾಗಿಲುಗಳು ತರುವವು ಮತ್ತು ಅಹ್ಮದಿಯಾ ಜಮಾಅತ್ ಐರ್ಲ್ಯಾಂಡ್ ಪ್ರಗತಿಗಳ ಒಂದು ಹೊಸ ಯುಗದಲ್ಲಿ ಪ್ರವೇಶಿಸುವುವು ಮತ್ತು ಲೋಕದಲ್ಲೆಲ್ಲಾ ಹರಡಿರುವ ಇತರ ಸಮುದಾಯಗಳಂತೆ ಐರಿಶ್ ಸಮುದಾಯ ಸಹ ಹಜ್ರತ್ ಅಕ್‌ದಸ್ ಮಸೀಹ್ ಮೌಊದ್(ಅ) ರವರ ಸರೋವರದಿಂದ ಅನುಗ್ರಹ ಪಡೆಯುವರು.

**(ಮುಂದುವರಿಯುವುದು)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ವಿಷೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.